ಜನತಾವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಶುಕ್ರವಾರ, ನವೆಂಬರ್ 26, 2021

ಸಂಪುಟ : 48 ಸಂಚಿಕೆ : 195 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 8 ರೂ : 4.00 www.janathavani.com janathavani@mac.com

ಜಿಲ್ಲೆಯಲ್ಲಿ ಭತ್ತ ಖರೀದಿ ಕೇಂದ್ರ

ದಾವಣಗೆರೆ, ಹರಿಹರ, ಹೊನ್ನಾಳಿ, ಚನ್ನಗಿರಿಗಳಲ್ಲಿ ಖರೀದಿ ಕೇಂದ್ರ : ಡಿಸಿ

ದಾವಣಗೆರೆ, ನ. 25 - ಜಿಲ್ಲೆಯಲ್ಲಿ ಭತ್ತ ಖರೀದಿ ಕೇಂದ್ರ ಆರಂಭಿಸಿರುವುದಾಗಿ ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ತಿಳಿಸಿದ್ದಾರೆ.

ಅಪರ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ನಡೆದ ಭತ್ತದ ಬೆಂಬಲ ಬೆಲೆ ಹಾಗೂ ಭತ್ತ ಖರೀದಿ ಕೇಂದ್ರ ತೆರೆಯುವ ಬಗೆಗಿನ ಸಭೆಯಲ್ಲಿ ಮಾತನಾಡಿದ ಅವರು, ಸರ್ಕಾರ ಭತ್ತಕ್ಕೆ ಬೆಂಬಲ ಬೆಲೆ ನೀಡಿ ಕೊಂಡುಕೊಳ್ಳಲು ಖರೀದಿ ಕೇಂದ್ರ ತೆರೆದಿದ್ದು, ರೈತರು ಬೆಂಬಲ ಬೆಲೆಗಿಂತ ಕಡಿಮೆ ಬೆಲೆಗೆ ಭತ್ತ ಮಾರಿ ಕೈ ಸುಟ್ಟುಕೊಳ್ಳಬಾರದು ಎಂದು ಬೀಳಗಿ ಹೇಳಿದ್ದಾರೆ.

ಕೇಂದ್ರ ಸರ್ಕಾರ 2021-22ನೇ ಸಾಲಿಗೆ ರೈತರಿಂದ ಕನಿಷ್ಠ ಬೆಂಬಲ ಬೆಲೆಗೆ ಭತ್ತ ಖರೀದಿಸಲು ನಿರ್ಧರಿಸಿದ್ದು, ಅದರಂತೆ ಸಾಮಾನ್ಯ ಭತ್ತಕ್ಕೆ 1940 ರೂ., ಹಾಗೂ ಗ್ರೇಡ್-ಎ ಭತ್ತಕ್ಕೆ 1960 ರೂ., ಬೆಂಬಲ ಬೆಲೆ ಘೋಷಿಸಿದೆ ಎಂದರು.

ರಾಜ್ಯದ ರೈತರಿಂದ 3.35 ಲಕ್ಷ ಮೆ.ಟನ್ ಭತ್ತವನ್ನು ಖರೀದಿಸುತ್ತಿದ್ದು, ಜಿಲ್ಲೆಯ ದಾವಣಗೆರೆ, ಹರಿಹರ, ಹೊನ್ನಾಳಿ ಹಾಗೂ ಚನ್ನಗಿರಿ ತಾಲ್ಲೂಕು ಕೇಂದ್ರಗಳಲ್ಲಿ ಖರೀದಿ ಕೇಂದ್ರ ತೆರೆಯಲಾಗಿದೆ. ರೈತರು ಭತ್ತವನ್ನು ಈ ಖರೀದಿ ಕೇಂದ್ರಗಳಲ್ಲಿ ಕನಿಷ್ಠ ಬೆಂಬಲ ಬೆಲೆಗೆ ಮಾರಬಹುದಾಗಿದೆ ಎಂದರು.

ಎಫ್.ಎ.ಕ್ಯೂ ಗುಣಮಟ್ಟದ ಭತ್ತವನ್ನು ಮಾರಲು ಇಚ್ಛಿಸುವ ರೈತರು ಎ.ಪಿ.ಎಂ.ಸಿ ಮಾರುಕಟ್ಟೆಯಲ್ಲಿನ ಕೆ.ಎಫ್.ಸಿ.ಸಿ ಕೇಂದ್ರದಲ್ಲಿ ನೋಂದಣಿ ಮಾಡಿಕೊಳ್ಳ ಬಹುದು. ಭತ್ತ ಖರೀದಿಸಲು ಅಕ್ಕಿ ಗಿರಣಿ ಮಾಲೀಕರು ಹೆಚ್ಚಿನ ಸಂಖ್ಯೆಯಲ್ಲಿ ನೋಂದಣಿ ಮಾಡಿಕೊಳ್ಳಬೇಕು ಎಂದರು.

ಯಾವುದೇ ಕಾರಣಕ್ಕೂ ಖರೀದಿ ಕೇಂದ್ರಗಳಲ್ಲಿ ದಲ್ಲಾಳಿಗಳು ಕಂಡು ಬಂದರೆ ಅಥವಾ ರೈತರ ಹೆಸರಲ್ಲಿ ಭತ್ತ ಮಾರಲು ಪ್ರಯತ್ನಿಸಿದರೆ, ಅಂತಹವರ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಸಿದರು.

ಈ ಸಂದರ್ಭದಲ್ಲಿ ಅಪರ ಜಿಲ್ಲಾಧಿಕಾರಿ ಸದಾಶಿವ ಪ್ರಭು, ಆಹಾರ ಇಲಾಖೆ ಜಂಟಿ ನಿರ್ದೇಶಕ ಮಂಟೆಸ್ವಾಮಿ, ಕೃಷಿ ಇಲಾಖೆ ಜಂಟಿ ನಿರ್ದೇಶಕ ಶ್ರೀನಿವಾಸ ಚಿಂತಾಲ, ಎ.ಪಿ.ಎಂ.ಸಿ ಕಾರ್ಯದರ್ಶಿ ಪ್ರಭು ಉಪಸ್ಥಿತರಿದ್ದರು.

ವೈದ್ಯಕೀಯ : ಆರ್ಥಿಕ ಮೀಸಲಾತಿ ಪರಿಶೀಲನೆ

ನವದೆಹಲಿ, ನ. 25 - ಆರ್ಥಿಕವಾಗಿ ಹಿಂದುಳಿದ ವರ್ಗಗಳಿಗೆ ವೈದ್ಯಕೀಯ ಪಿ.ಜಿ. ಪ್ರವೇಶಕ್ಕೆ ಮೀಸಲಾತಿ ಕಲ್ಪಿಸುವಾಗ ನಿಗದಿಯಾಗಿರುವ 8 ಲಕ್ಷ ರೂ.ಗಳ ಆದಾಯ ಮಿತಿಯನ್ನು ಪರಿಶೀಲಿಸುವು ದಾಗಿ ಸುಪ್ರೀಂ ಕೋರ್ಟ್‌ಗೆ ಕೇಂದ್ರ ಸರ್ಕಾರ ತಿಳಿಸಿದೆ.

ನ್ಯಾಯಮೂರ್ತಿಗಳಾದ ಡಿ.ವೈ. ಚಂದ್ರಚೂಡ್, ಸೂರ್ಯಕಾಂತ ಹಾಗೂ ವಿಕ್ರಮ್ ನಾಥ್ ಅವರನ್ನು ಒಳಗೊಂಡ ಪೀಠದ ಎದುರು ಹಾಜರಾದ ಸಾಲಿಸಿಟರ್ ಜನರಲ್ ತುಶಾರ್ ಮೆಹ್ತ, ಇ.ಡಬ್ಲ್ಯೂ.ಎಸ್. ವರ್ಗದವರಿಗೆ ಆದಾಯದ ಮಾನದಂಡ ನಿಗದಿ ಪಡಿಸಲು ಸಮಿತಿ ರಚಿಸಲಾಗುವುದು. ಇದಕ್ಕೆ ನಾಲ್ಕು ವಾರಗಳು ಬೇಕಾಗಲಿವೆ ಎಂದಿದ್ದಾರೆ.

ನ್ಯಾಯಾಲಯಕ್ಕೆ ಸರ್ಕಾರ ನೀಡಿದ ಭರವಸೆಯ ರೀತಿಯಲ್ಲೇ ನೀಟ್ (ಪಿ.ಜಿ.) ಕೌನ್ಸೆಲಿಂಗ್ ಅನ್ನು ನಾಲ್ಕು (4ನೇ ಪುಟಕ್ಕೆ)

100ಕ್ಕೂ ಹೆಚ್ಚು ವೈದ್ಯ ವಿದ್ಯಾರ್ಥಿಗಳಿಗೆ ಸೋಂಕು

ಧಾರವಾಡ, ನ.25 - ಇಲ್ಲಿಗೆ ಸಮೀಪದ ಎಸ್.ಡಿ.ಎಂ. ವೈದ್ಯಕೀಯ ಕಾಲೇಜಿನ 100 ಕ್ಕೂ ಹೆಚ್ಚು ವಿದ್ಯಾರ್ಥಿಗಳಲ್ಲಿ ಬುಧವಾರ ಕೊರೊನಾ ಸೋಂಕು ದೃಢಪಟ್ಟಿದೆ. ವಿದ್ಯಾರ್ಥಿಗಳಲ್ಲಿ ಕೊರೊನಾ ಲಕ್ಷಣಗಳಿಲ್ಲ. ಆದರೆ, ಸ್ವಲ್ಪ ಮೈಕೈ ನೋವು ಕಾಣಿಸಿಕೊಂಡಿದೆ.

ಅವರಿಗೆ ಕಾಲೇಜಿನ ಹಾಸ್ಟೆಲ್‌ನಲ್ಲಿ ಆರೈಕೆ ಮಾಡಲಾಗುತ್ತಿದೆ. ಇವರಿಗೆ ಕೋವಿಡ್ ಯಾರ ಸಂಪರ್ಕದಿಂದ ಬಂದಿದೆ ಎಂಬುದು ಇನ್ನೂ ತಿಳಿದು ಬಂದಿಲ್ಲ.

ನಾಲ್ವರು ವಿದ್ಯಾರ್ಥಿಗಳಲ್ಲಿ ಸೋಂಕು ದೃಢಪಟ್ಟ ಹಿನ್ನೆಲೆಯಲ್ಲಿ, ಹಾಸ್ಟೆಲ್‌ನ 270 ವಿದ್ಯಾರ್ಥಿಗಳಿಗೆ ಪರೀಕ್ಷೆ ಮಾಡಿಸಲಾಗಿತ್ತು. ಆಗ 100 ಕ್ಕೂ ಹೆಚ್ಚು ವಿದ್ಯಾರ್ಥಿಗಳಲ್ಲಿ ಸೋಂಕಿರುವುದು ಕಂಡು ಬಂದಿದೆ. ಇನ್ನೂ 200 ವಿದ್ಯಾರ್ಥಿಗಳ ತಪಾಸಣೆಗೆ ನಿರ್ಧರಿಸಲಾಗಿದೆ. ಸದ್ಯ ಹಾಸ್ಟೆಲ್‌ನಲ್ಲಿ ಸೋಂಕಿತ ವಿದ್ಯಾರ್ಥಿಗಳಿಗೆ ಕ್ವಾರಂಟೈನ್ ಮಾಡಲಾಗಿದೆ ಎಂದು ಜಿಲ್ಲಾಧಿಕಾರಿ ನಿತೇಶ್ ಪಾಟೀಲ್ ತಿಳಿಸಿದ್ದಾರೆ.

ಸೋಂಕು ಹರಡುವುದನ್ನು (5ನೇ ಪುಟಕ್ಕೆ)

ಬ್ಯಾಂಕುಗಳ ಖಾಸಗೀಕರಣಕ್ಕೆ ಮಸೂದೆ ಮಂಡನೆ

ನವದೆಹಲಿ, ನ. 25 – ಸರ್ಕಾರಿ ಸ್ವಾಮ್ಯದ ಎರಡು ಬ್ಯಾಂಕುಗಳ ಖಾಸಗೀಕರಣಕ್ಕಾಗಿ ಕೇಂದ್ರ ಸರ್ಕಾರ ಮುಂಬರುವ ಚಳಿಗಾಲದ ಅಧಿವೇಶನದಲ್ಲಿ ಬ್ಯಾಂಕಿಂಗ್ ಕಾಯ್ದೆಗಳ ತಿದ್ದುಪಡಿ ಮಸೂದೆ ಮಂಡಿಸಲಿದೆ.

ಸರ್ಕಾರಿ ಬ್ಯಾಂಕುಗಳ ಖಾಸಗೀಕರಣದ ಮೂಲಕ 1.75 ಲಕ್ಷ ಕೋಟಿ ರೂ. ಪಡೆಯುವುದಾಗಿ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು 2021-22ರ ಬಜೆಟ್ ಮಂಡಿಸುವ ವೇಳೆ ತಿಳಿಸಿದ್ದರು. ಬ್ಯಾಂಕಿಂಗ್ ಕಾನೂನುಗಳ ತಿದ್ದುಪಡಿ ಮಸೂದೆ ಮೂಲಕ ಸರ್ಕಾರಿ ಸ್ವಾಮ್ಯದ ಬ್ಯಾಂಕುಗಳಲ್ಲಿ ಸರ್ಕಾರ ಹೊಂದಿರಬೇಕಾದ ಕನಿಷ್ಠ ಪಾಲನ್ನು ಶೇ.51ರಿಂದ ಶೇ.26ಕ್ಕೆ ಇಳಿಸಲಿದೆ. ಆದರೆ, ಈ ಬಗ್ಗೆ ಕೇಂದ್ರ ಸಂಪುಟ ಅಂತಿಮ ನಿರ್ಧಾರ ತೆಗೆದುಕೊಳ್ಳಬೇಕಿದೆ ಎಂದು ಮೂಲಗಳು ತಿಳಿಸಿವೆ.

ದಕ್ಷಿಣ ಆಫ್ರಿಕಾದಲ್ಲಿ ಕೊರೊನಾದ ಹೊಸ ರೂಪಾಂತರಿ ಪತ್ತೆ

ಜೊಹಾನ್ಸ್‌ಬರ್ಗ್/ನವದೆಹಲಿ, ನ. 25 – ದಕ್ಷಿಣ ಆಫ್ರಿಕಾದಲ್ಲಿ ಅತ್ಯಂತ ವೇಗವಾಗಿ ಹರಡುವ ಕೊರೊನಾದ ರೂಪಾಂತರಿ ಪತ್ತೆಯಾಗಿದ್ದು, ಈ ಬಗ್ಗೆ ಭಾರತದಲ್ಲೂ ಕಟ್ಟೆಚ್ಚರ ವಹಿಸಲಾಗಿದೆ.

ಹೊಸ ರೂಪಾಂತರಿ ಕಾರಣದಿಂದಾಗಿ

ಭಾರತದಲ್ಲಿ ಕಟ್ಟೆಚ್ಚರ ವಹಿಸಲು ಕೇಂದ್ರ ಸರ್ಕಾರದ ಆದೇಶ

ದಕ್ಷಿಣ ಆಫ್ರಿಕಾದಲ್ಲಿ ಸೋಂಕು ವೇಗವಾಗಿ ಹರಡುತ್ತಿರುವುದನ್ನು ಅಲ್ಲಿನ ಆರೋಗ್ಯ ಸಚಿವರು ಗುರುವಾರ ಖಚಿತ ಪಡಿಸಿದ್ದಾರೆ. ಹೊಸ ರೂಪಾಂತರಿಗೆ ಬಿ.1.1.529 ಎಂಬ ಗುರುತು ನೀಡಲಾಗಿದೆ.

ಮಾಧ್ಯಮಗಳ ಜೊತೆ ಮಾತನಾಡಿರುವ ದಕ್ಷಿಣ ಆಫ್ರಿಕಾ ಆರೋಗ್ಯ ಸಚಿವ ಜೋ ಫಾಹ್ಲ, ಕೊರೊನಾ ನಾಲ್ಕನೇ ಅಲೆ (5ನೇ ಪುಟಕ್ಕೆ)

ಬೆಳೆ ಪರಿಹಾರ ಅರ್ಜಿ ಸ್ವೀಕಾರ : ಅವಧಿ ವಿಸ್ತರಿಸಿ

ರಾಣೇಬೆನ್ನೂರು

ರಾಣೇಬೆನ್ನೂರು, ನ.25- ಬೆಳೆ ಪರಿಹಾರದ ಅರ್ಜಿ ಸ್ವೀಕರಿಸುವ ಅವಧಿಯನ್ನು ಡಿಸೆಂಬರ್ 15 ರ ವರೆಗೆ ಮುಂದುವರೆಸಿ, ಪ್ರತಿ ಎಕರೆಗೆ 50 ಸಾವಿರ ರೂ. ಪರಿಹಾರ ಮತ್ತು ಈ ಹಿಂದೆ ಮಾಜಿ ಸಿಎಂ ಯಡಿಯೂರಪ್ಪ ಘೋಷಿಸಿದ್ದ ಪ್ರತಿ ಎಕರೆಗೆ 10 ಸಾವಿರ ರೂ.ಪರಿಹಾರ ಎರಡನ್ನೂ ಸೇರಿಸಿ ರೈತರಿಗೆ ವಿತರಿಸುವಂತೆ ಒತ್ತಾಯಿಸಿ ಕರ್ನಾಟಕ ರಾಜ್ಯ ರೈತ ಸಂಘದ ರಾಜ್ಯ ಸಂಘಟನಾ ಕಾರ್ಯದರ್ಶಿ ರವೀಂದ್ರಗೌಡ ಎಫ್. ಪಾಟೀಲ ಅವರು ರಾಣೇಬೆನ್ನೂರು ತಹಶೀಲ್ದಾರ್ ಮೂಲಕ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಿದರು.

ಮಳೆ ನೀರಿನಿಂದ ಮನೆಗಳು ಜಲಾವೃತವಾಗಿ ರೈತರಿಗೆ ದಾಖಲಾತಿಗಳು ಸಿಗುತ್ತಿಲ್ಲ. ವಿದ್ಯುತ್ ಅಡಚಣೆ ಉಂಟಾಗಿ ಗ್ರಾಮೀಣ ಭಾಗದಲ್ಲಿ ಪಹಣಿ ಪತ್ರಿಕೆಗಳು ಸಿಗುತ್ತಿಲ್ಲ. ಪಹಣಿ ಪತ್ರಿಕೆ ಸಿಕ್ಕರೆ ಸರ್ವರ್ ಸಮಸ್ಯೆ ಎದುರಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಅರ್ಜಿ ದಿನಾಂಕ ವಿಸ್ತರಿಸುವಂತೆ ಅವರು ಮನವಿಯಲ್ಲಿ ತಿಳಿಸಿದ್ದಾರೆ.

ಈ ಸಂದರ್ಭದಲ್ಲಿ ರೈತ ಮುಖಂಡರಾದ ಚಂದ್ರಪ್ಪ ಬೇಡರ, ಬಸವರಾಜ ಕೊಂಗಿಯವರ, ಗದಿಗೆಪ್ಪ ಹೊಸಳ್ಳಿ, ಹರಿಹರಗೌಡ ಪಾಟೀಲ, ಜಗದೀಶ ಕೆರೂಡಿ ,ಇಕ್ಬಾಲ್‌ಸಾಬ್ ರಾಣೇಬೆನ್ನೂರು, ಶಿವಪ್ಪ ಬಡಕರಿಯಪ್ಪನವರ, ಪ್ರದೀಪ್ಪ ಅಕ್ಕೇರ ಮುಂತಾದವರು ಹಾಜರಿದ್ದರು.

ಹಿಂದಿ - ಇಂಗ್ಲಿಷ್ ಆಶುಭಾಷಣ ಸ್ಪರ್ಧೆಗೆ ಕರವೇ ಖಂಡನೆ

ದಾವಣಗೆರೆ, ನ.25- ಹಿಂದಿ-ಇಂಗ್ಲಿಷ್ ಆಶುಭಾಷಣ ಸ್ಪರ್ಧೆ ನಡೆಸಲು ಮುಂದಾಗಿರುವ ಸರ್ಕಾರದ ಆದೇಶಕ್ಕೆ ಕರ್ನಾಟಕ ರಕ್ಷಣಾ ವೇದಿಕೆ ಖಂಡನೆ ವ್ಯಕ್ತಪಡಿಸಿದೆ.

ನಗರದ ಜಿಲ್ಲಾಡಳಿತ ಭವನದಲ್ಲಿನ ನೆಹರು ಯುವ ಕೇಂದ್ರದ ಕಚೇರಿಯ ಸಹಾಯಕ ಅಧಿಕಾರಿಗೆ ಕರ್ನಾಟಕ ರಕ್ಷಣಾ ವೇದಿಕೆ ಕಾರ್ಯಕರ್ತರು ಮನವಿ ಸಲ್ಲಿಸಿದರು.

ವೇದಿಕೆ ಜಿಲ್ಲಾಧ್ಯಕ್ಷ ಎಂ.ಎಸ್. ರಾಮೇಗೌಡ ಮಾತನಾಡಿ, ಆಶುಭಾಷಣ ಸ್ಪರ್ಧೆಯನ್ನು ಹಿಂದಿ-ಇಂಗ್ಲಿಷ್ ಭಾಷೆಯಲ್ಲಿ ನಡೆಸುವಂತೆ ಸರ್ಕಾರದಿಂದ ಆದೇಶ ಬಂದಿದೆ ಅಂದ ಮಾತ್ರಕ್ಕೆ ಕನ್ನಡವನ್ನು ಕಡೆಗಣಿಸಿ ಅಂತಾ ಅರ್ಥವಲ್ಲ. ಆಶುಭಾಷಣ ಸ್ಪರ್ಧೆಯಲ್ಲಿ ಕನ್ನಡದಲ್ಲಿಯೂ ಮಾತನಾಡಲು ಅವಕಾಶ ಮಾಡಿಕೊಡಬೇಕು. ಈ ಬಗ್ಗೆ ನೆಹರು ಯುವ ಕೇಂದ್ರದ ಅಧಿಕಾರಿಗಳು ಬೇಡಿಕೆಯನ್ನು ಸರ್ಕಾರದ ಗಮನಕ್ಕೆ ತರಬೇಕು. ಈ ಸ್ಪರ್ಧೆ ಮಾಡುವುದಕ್ಕೆ ನಮ್ಮ ವಿರೋಧವಿಲ್ಲ. ಆದರೆ, ಕನ್ನಡ ಭಾಷೆಯನ್ನು ಕಡೆಗಣಿಸಿ, ಹಿಂದಿ, ಇಂಗ್ಲಿಷ್ ಭಾಷೆ ಹೇರಲು ಹೊರಟಿದ್ದಕ್ಕೆ ಸಂಪೂರ್ಣ ವಿರೋಧವಿದೆ ಎಂದು ಆಕ್ಷೇಪಿಸಿದರು.

ಆಶುಭಾಷಣ ಸ್ಪರ್ಧೆಯಲ್ಲಿ ಕನ್ನಡದಲ್ಲಿ ಮಾತನಾಡಲು ಅವಕಾಶ ಮಾಡಿಕೊಟ್ಟಿರುವುದಾಗಿ ನೆಹರು ಯುವ ಕೇಂದ್ರ, ಸರ್ಕಾರ ಮಾಧ್ಯಮಗಳ ಮುಖಾಂತರ ಸ್ಪಷ್ಟಪಡಿಸಬೇಕು. ಕೇಂದ್ರ ಸರ್ಕಾರ ಈಚೆಗೆ ಕನ್ನಡ ವಿರೋಧಿತನ ತೋರಿಸುತ್ತಿದೆ. ನ.1ಕ್ಕೆ ಕನ್ನಡ ಬಾವುಟ ಹಾರಿಸದೇ ಇರುವುದು, ಬ್ಯಾಂಕಿಂಗ್ ಕ್ಷೇತ್ರ, ರೈಲ್ವೇ, ಅಂಚೆ ಇಲಾಖೆ, ಕೌಶಲ್ಯ ಅಭಿವೃದ್ಧಿ ಯೋಜನೆಯಲ್ಲಿ ಹಿಂದಿ ಹೇರಿಕೆ ಮಾಡುತ್ತಿದ್ದ ಕೇಂದ್ರ ಸರ್ಕಾರ ಈಗ ನೆಹರು ಯುವ ಕೇಂದ್ರದಲ್ಲಿ ಹಿಂದಿ, ಇಂಗ್ಲಿಷ್ ಹೇರಲು ಮುಂದಾಗಿದೆ.

ಈ ಮೂಲಕ ನಾಡ ದ್ರೋಹ ಮಾಡುವ ಕೆಲಸಕ್ಕೆ ಕೈ ಹಾಕಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಮಹಿಳಾ ಘಟಕದ ಜಿಲ್ಲಾಧ್ಯಕ್ಷೆ ಬಸಮ್ಮ, ಕಾರ್ಯದರ್ಶಿ ಮಂಜುಳ, ಸಾಕಮ್ಮ, ಶಾಂತಮ್ಮ, ಡಿ. ಮಲ್ಲಿಕಾರ್ಜುನ್, ಕೆ.ಜಿ. ಬಸವರಾಜ, ಸಂತೋಷ, ಮುಬಾರಕ್, ಅನ್ವರ್ ಬಾಷಾ, ಬಾಷಾ ಸಾಬ್, ದಕ್ಷಿಣ ಅಧ್ಯಕ್ಷ ಜಬೀವುಲ್ಲಾ, ರಫೀಕ್, ಅಯೂಬ್, ಸಲೀಂ, ದಾದಾಪೀರ್, ರಫೀಕ್ ಶೇಟ್ ಸೇರಿದಂತೆ ಇತರರು ಇದ್ದರು.

14 ಕ್ಕಿಂತ ಹೆಚ್ಚು ಸ್ಥಾನಗಳಲ್ಲಿ ಕಾಂಗ್ರೆಸ್ ಗೆಲುವು

ಹಾವೇರಿಯಲ್ಲಿ ಧಾರವಾಡ ಪರಿಷತ್ ಅಭ್ಯರ್ಥಿ ಸಲೀಂ ಅಹ್ಮದ್ ವಿಶ್ವಾಸ

ಹಾವೇರಿ, ನ. 25- ವಿಧಾನ ಪರಿಷತ್ ಚುನಾವಣೆಯಲ್ಲಿ ಹೆಚ್ಚು ಮತಗಳ ಅಂತರದಿಂದ ಮತದಾರರು ನನ್ನನ್ನು ಆಯ್ಕೆ ಮಾಡುತ್ತಾರೆ. ರಾಜ್ಯದಲ್ಲಿ 14 ಸ್ಥಾನಗಳಿಗಿಂತ ಹೆಚ್ಚು ಸ್ಥಾನವನ್ನು ಕಾಂಗ್ರೆಸ್ ಗೆಲ್ಲಲಿದೆ ಎಂಬ ವಿಶ್ವಾಸವನ್ನು ಧಾರವಾಡ ವಿಧಾನ ಪರಿಷತ್ ಚುನಾವಣೆಯ ಕಾಂಗ್ರೆಸ್ ಅಭ್ಯರ್ಥಿ ಸಲೀಂ ಅಹ್ಮದ್ ವ್ಯಕ್ತಪಡಿಸಿದರು.

ನಿನ್ನೆ ಇಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಳೆದ 25 ವರ್ಷಗಳಿಂದ ಹಾವೇರಿ ಜಿಲ್ಲೆಯೊಂದಿಗೆ ನಿಕಟ ಸಂಪರ್ಕವನ್ನು ಇಟ್ಟುಕೊಂಡಿದ್ದೇನೆ. ಎರಡು ಬಾರಿ ವಿಧಾನಪರಿಷತ್ ಸದಸ್ಯನಾಗಿದ್ದ ಸಮಯದಲ್ಲಿ ಈ ಜಿಲ್ಲೆಯನ್ನು ನೋಡಲ್ ಜಿಲ್ಲೆಯಾಗಿ ತೆಗೆದುಕೊಂಡು ನನ್ನ ಸಂಪೂರ್ಣ ಅನುದಾನವನ್ನು ಈ ಜಿಲ್ಲೆಯ ಅಭಿವೃದ್ಧಿಗೇ ನೀಡಿದ್ದೇನೆ. ಹಾಗಾಗಿ ನನಗೆ ಓಟು ಕೊಟ್ಟು ಗೆಲ್ಲಿಸಬೇಕು ಎಂದು ಮನವಿ ಮಾಡುತ್ತೇನೆ ಎಂದರು.

ರಾಜ್ಯ ಹಾಗೂ ಕೇಂದ್ರ ಸರ್ಕಾರದ ವೈಫಲ್ಯಗಳು, ಅಗತ್ಯ ವಸ್ತುಗಳ ಬೆಲೆ ಏರಿಕೆ, ಭ್ರಷ್ಟಾಚಾರ, ಗ್ರಾಮ ಪಂಚಾಯತಿಗಳಿಗೆ ಬಾರದ ಅನುದಾನ, ಅಭಿವೃದ್ಧಿಯಾಗದ ವಿಚಾರಗಳನ್ನು ಮುಂದಿಟ್ಟು ಕೊಂಡು ಮತ ಯಾಚನೆ ಮಾಡುತ್ತೇವೆ ಎಂದರು.

ಕೇಂದ್ರ ಸರ್ಕಾರದ ರೈತ ವಿರೋಧಿ ನೀತಿಗಳ ವಿರುದ್ಧ ಕಾಂಗ್ರೆಸ್ ಪಕ್ಷವು ರಾಹುಲ್ ಗಾಂಧಿ ನೇತೃತ್ವದಲ್ಲಿ ಹೋರಾಟ ಮಾಡಿಕೊಂಡು ಬಂದಿದ್ದು, ಒಂದು ವರ್ಷದ ನಂತರ ಪ್ರಧಾನಿ ಎಚ್ಚೆತ್ತುಕೊಂಡರು, ನಾನು ತಪ್ಪು ಮಾಡಿದ್ದೇನೆ ಎನ್ನುವ ಅರಿವು ಅವರಿಗೆ ಆಗುವ ಹೊತ್ತಿಗೆ ದೇಶದಲ್ಲಿ 760 ಕ್ಕೂ ಹೆಚ್ಚು ರೈತರು ಮೃತಪಟ್ಟಿದ್ದಾರೆ. ಪ್ರತಿ ರೈತ ಕುಟುಂಬಕ್ಕೆ 25 ಲಕ್ಷ ರೂ. ಪರಿಹಾರ ಕೊಡಬೇಕು ಎಂದು ಒತ್ತಾಯಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾಜಿ ಸ್ಪೀಕರ್ ಕೆ.ಬಿ. ಕೋಳಿವಾಡ, ಮಾಜಿ ಸಚಿವರಾದ ಮನೋಹರ್ ತಹಶೀಲ್ದಾರ್, ಬಸವರಾಜ ಶಿವಣ್ಣನವರ, ರುದ್ರಪ್ಪ ಲಮಾಣಿ, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಎಂ.ಎಂ. ಹಿರೇಮಠ, ವಿಧಾನ ಪರಿಷತ್ ಮಾಜಿ ಸದಸ್ಯ ಸೋಮಣ್ಣ ಬೇವಿನಮರದ, ನಿಗಮ ಮಂಡಳಿ ಮಾಜಿ ಅಧ್ಯಕ್ಷ ಎಸ್.ಆರ್.ಪಾಟೀಲ ಮುಂತಾದವರು ಹಾಜರಿದ್ದರು.

ಇಂದು ಶಾಸಕ ರವೀಂದ್ರನಾಥ್ ಅಮೃತ ಮಹೋತ್ಸವ

ಹಿರಿಯ ಶಾಸಕ ಎಸ್.ಎ. ರವೀಂದ್ರ ನಾಥ್ ಅವರ '75ನೇ ಜನ್ಮದಿನ ಅಮೃತ ಮಹೋತ್ಸವ'ದ ಅಭಿನಂದನಾ ಸಮಾರಂಭ ಮತ್ತು ಎಸ್.ಎ.ಆರ್. ಅವರ ಕುರಿತ 'ಕೃಷಿ ಕಣ್ಣಿನಿ' ಪುಸ್ತಕ ಬಿಡುಗಡೆ ಸಮಾರಂಭವು ಇಂದು ಬೆಳಿಗ್ಗೆ 11 ಗಂಟೆಗೆ ಎಸ್.ಎಸ್. ಕಲ್ಯಾಣ ಮಂಪಟದಲ್ಲಿ ನಡೆಯಲಿದೆ.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದು, ನಿಕಟಪೂರ್ವ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅಭಿನಂದನಾ ಪುಸ್ತಕ ಬಿಡುಗಡೆ ಮಾಡಲಿದ್ದಾರೆ. ಬಿಜೆಪಿ ರಾಜ್ಯಾಧ್ಯಕ್ಷ ನಳಿನ್ ಕುಮಾರ್ ಕಟೀಲ್ ಗೌರವ ಸಮರ್ಪಣೆ ಮಾಡಲಿದ್ದಾರೆ. ಸಂಸದ ಜಿ.ಎ. ಸಿದ್ದೇಶ್ವರ ಅವರು ಅಭಿನಂದನಾ ನುಡಿಗಳನ್ನಾಡಲಿದ್ದು, ಮುಖ್ಯ ಅತಿಥಿಗಳಾಗಿ ಜಿಲ್ಲಾ ಉಸ್ತುವಾರಿ ಸಚಿವ ಭೈರತಿ ಬಸವರಾಜ್, ಶಾಸಕರುಗಳಾದ ಎಂ.ಪಿ. ರೇಣುಕಾಚಾರ್ಯ, ಎಸ್.ವಿ. ರಾಮಚಂದ್ರ, ಮಾಡಾಳ್ ವಿರೂಪಾಕ್ಷಪ್ಪ, ಪ್ರೊ.ಲಿಂಗಣ್ಣ, ಕರುಣಾಕರ ರೆಡ್ಡಿ ಆಗಮಿಸಲಿದ್ದಾರೆ.

ವೀರಶೈವ ಸಮಾಜದ ಅಧ್ಯಕ್ಷ, ಲಯನ್ಸ್ ಉಪ ರಾಜ್ಯಪಾಲ ಕೆ.ಸಿ.ವೀರಭದ್ರಪ್ಪ ನಿಧನ

ದಾವಣಗೆರೆ, ನ.25- ಭದ್ರಾವತಿ ತಾಲ್ಲೂಕು ಸಾಧು ವೀರಶೈವ ಸಮಾಜದ ಅಧ್ಯಕ್ಷರೂ, ಜಿಲ್ಲಾ ಲಯನ್ಸ್ 317 ಸಿ ಪ್ರಥಮ ಉಪ ರಾಜ್ಯಪಾಲರೂ ಆದ ಕೆ.ಸಿ. ವೀರಭದ್ರಪ್ಪ ಅವರು ಇಂದು ಮಧ್ಯಾಹ್ನ ನಿಧನರಾದರು.

ಸುಮಾರು 69 ವರ್ಷ ವಯಸ್ಸಿನ ವೀರಭದ್ರಪ್ಪ ಅವರು ಅನಾರೋಗ್ಯದಿಂದ ಬಳಲುತ್ತಿದ್ದರು. ಕಳೆದ ಕೆಲವು ದಿನಗಳಿಂದ ಹೃದಯಾಘಾತಕ್ಕೆ ಒಳಗಾಗಿದ್ದ ಅವರು, ಶಿವಮೊಗ್ಗದ ಮ್ಯಾಕ್ಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು.

ಪತ್ನಿ, ಸಹೋದರ-ಸಹೋದರಿಯನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ನಾಳೆ ದಿನಾಂಕ 26ರ ಶುಕ್ರವಾರ ಮಧ್ಯಾಹ್ನ 12.30ಕ್ಕೆ ಭದ್ರಾವತಿಯ ಬಾಬಳ್ಳಿಯಲ್ಲಿ ನಡೆಯಲಿದೆ ಎಂದು ಅವರ ಕುಟುಂಬ ವರ್ಗದವರು ತಿಳಿಸಿದ್ದಾರೆ.

ಮೂಲತಃ ಜಮೀನ್ದಾರ್ ಕುಟುಂಬದವರಾದ ವೀರಭದ್ರಪ್ಪ, ಭದ್ರಾವತಿಯ ಭದ್ರಾ ಕಾಲೋನಿ ಶ್ರೀ ರಾಮಾಂಜನೇಯ ಸ್ವಾಮಿ ದೇವಸ್ಥಾನ ಸಮಿತಿ ಅಧ್ಯಕ್ಷರಾಗಿ, ಹಾಲಪ್ಪ ವೃತ್ತ ಭದ್ರಾ ಪ್ರೌಢಶಾಲೆ ಆಡಳಿತ ಮಂಡಳಿ ನಿರ್ದೇಶಕರಾಗಿ, ಜನ್ನಾಪುರ ಶ್ರೀ ಬಸವೇಶ್ವರ ವಿದ್ಯಾವರ್ಧಕ ಸಂಘದ ನಿರ್ದೇಶಕರಾಗಿ ಸೇವೆ ಸಲ್ಲಿಸುತ್ತಿದ್ದರು. ಭದ್ರಾವತಿ ತಾಲ್ಲೂಕು ಎಪಿಎಂಸಿ ಅಧ್ಯಕ್ಷರಾಗಿ, ವೀರಾಪೂರ ರೈತರ ಸಹಕಾರ ಸಂಘದ ಬ್ಯಾಂಕ್ ಅಧ್ಯಕ್ಷರಾಗಿ, ಸೀಗೆಬಾಗಿ ರೈತರ ನೀರು ಬಳಕೆದಾರರ ಸಂಘದ ಅಧ್ಯಕ್ಷರಾಗಿ ಸೇವೆಸಲ್ಲಿಸಿದ್ದರು.

ಭದ್ರಾವತಿ ಲಯನ್ಸ್ ಕ್ಲಬ್ ಸಕ್ರಿಯ ಸದಸ್ಯರಾಗಿದ್ದ ಕೆ.ಸಿ.ವೀರಭದ್ರಪ್ಪ, ಕ್ಲಬ್‌ನ ಹಲವಾರು ಹುದ್ದೆಗಳಲ್ಲಿ ಕಾರ್ಯ ನಿರ್ವಹಿಸಿ, ಇದೀಗ ಜಿಲ್ಲಾ ಲಯನ್ಸ್ 317 ಸಿ ಪ್ರಥಮ ಉಪ ರಾಜ್ಯಪಾಲರಾಗಿದ್ದರು.

ಗಣ್ಯರ ಶೋಕ : ವೀರಭದ್ರಪ್ಪ ಅವರ ನಿಧನಕ್ಕೆ ದಾವಣಗೆರೆ ಲಯನ್ಸ್ ಸಂಸ್ಥೆಯ ಜಿಲ್ಲಾ ಮಾಜಿ ರಾಜ್ಯಪಾಲರುಗಳಾದ ಡಾ. ಬಿ.ಎಸ್.ನಾಗಪ್ರಕಾಶ್, ಎ.ಆರ್.ಉಜ್ಜಿನಪ್ಪ, ಹೆಚ್. ಎನ್.ಶಿವಕುಮಾರ್, ಜಿಲ್ಲಾ ಛೇರ್ಮನ್‌ರುಗಳಾದ ಮಲೇಬೆನ್ನೂರಿನ ಓ.ಜಿ.ರುದ್ರೇಗೌಡ, ಬೆಳ್ಳೂಡಿ ಶಿವಕುಮಾರ್ ಅವರುಗಳು ಮೃತರ ನಿವಾಸಕ್ಕೆ ಭೇಟಿ ನೀಡಿ, ವೀರಭದ್ರಪ್ಪ ಅವರ ಅಂತಿಮ ದರ್ಶನ ಪಡೆದರು.

ಸದಾ ಹಸನ್ಮುಖಿ, ಸರಳ ಸಜ್ಜನಿಕೆಗೆ ಹೆಸರಾಗಿದ್ದ ವೀರಭದ್ರಪ್ಪ ಅವರು ಲಯನ್ಸ್ ಕ್ಲಬ್ ಮೂಲಕ ಸಾಮಾಜಿಕ ಸೇವೆಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದರು ಎಂದು ಡಾ. ಬಿ.ಎಸ್.ನಾಗಪ್ರಕಾಶ್ ಅವರು ವೀರಭದ್ರಪ್ಪ ಅವರ ವ್ಯಕ್ತಿತ್ವವನ್ನು ಮೆಲುಕು ಹಾಕಿದ್ದಾರೆ.

ಲಯನ್ಸ್ ಪ್ರಾಂತೀಯ ಅಧ್ಯಕ್ಷ ಇ.ಎಂ.ಮಂಜುನಾಥ, ದಾವಣಗೆರೆ ಲಯನ್ಸ್ ಕ್ಲಬ್ ಅಧ್ಯಕ್ಷ ಎಸ್. ಓಂಕಾರಪ್ಪ, ಕಾರ್ಯದರ್ಶಿ ಕೋರಿ ಶಿವಕುಮಾರ್, ಖಜಾಂಚಿ ಕಣವಿ ನಟರಾಜ್, ಸಹಕಾರ್ಯದರ್ಶಿ ಎಸ್. ಕೆ.ಮಲ್ಲಿಕಾರ್ಜುನ್, ವಲಯಾಧ್ಯಕ್ಷ ಎಸ್. ವೆಂಕಟಚಾಲಂ, ದೇವರಮನೆ ನಾಗರಾಜ್, ಮಹಾಂತೇಶ್ ಒಣರೊಟ್ಟಿ, ವೈ.ಬಿ.ಸತೀಶ್ ಮತ್ತಿತರರು ವೀರಭದ್ರಪ್ಪ ನಿಧನಕ್ಕೆ ತೀವ್ರ ಸಂತಾಪ ವ್ಯಕ್ತಪಡಿಸಿದ್ದಾರೆ.

ನಗರದಲ್ಲಿ ನಾಳೆ ಜೆಡಿಎಸ್ ದಕ್ಷಿಣ ವಿ.ಸಭಾ ಕ್ಷೇತ್ರದ ಅಧ್ಯಕ್ಷರ ಪದಗ್ರಹಣ

ದಾವಣಗೆರೆ, ನ.25- ಜನತಾದಳ (ಜಾತ್ಯತೀತ) ಪಕ್ಷದ ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಅಧ್ಯಕ್ಷರಾಗಿ ತಾವು ಪದಗ್ರಹಣ ಸ್ವೀಕರಿಸುತ್ತಿದ್ದು, ಪದಗ್ರಹಣ ಹಾಗೂ ಪಕ್ಷದ ಸದಸ್ಯತ್ವ ನೋಂದಣಿ ಅಭಿಯಾನ ಸಮಾರಂಭವು ನಾಡಿದ್ದು ದಿನಾಂಕ 27ರ ಶನಿವಾರ ಬೆಳಿಗ್ಗೆ 11 ಗಂಟೆಗೆ ರೋಟರಿ ಬಾಲಭವನದಲ್ಲಿ ನಡೆಯಲಿದೆ ಎಂದು ದಕ್ಷಿಣ ವಿಧಾನಸಭಾ ಕ್ಷೇತ್ರದ ನೂತನ ಅಧ್ಯಕ್ಷ ಯು.ಎಂ. ಮನ್ಸೂರ್ ಅಲಿ ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾರ್ಯಕ್ರಮಕ್ಕೆ ವಿಶೇಷ ಆಹ್ವಾನಿತರಾಗಿ ಜೆಡಿಎಸ್ ಜಿಲ್ಲಾಧ್ಯಕ್ಷ ಬಿ.ಚಿದಾನಂದಪ್ಪ, ಮಾಜಿ ಶಾಸಕ ಹೆಚ್.ಎಸ್. ಶಿವಶಂಕರ್, ಜಿಲ್ಲಾ ಕಾರ್ಯಾಧ್ಯಕ್ಷರಾದ ಟಿ.ಗಣೇಶ್ ದಾಸಕರಿಯಪ್ಪ, ಪ್ರಧಾನ ಕಾರ್ಯದರ್ಶಿ ಜೆ.ಅಮಾನುಲ್ಲಾ ಖಾನ್, ರಾಜ್ಯ ಕಾರ್ಯದರ್ಶಿ ಟಿ.ಅಸ್ಗರ್ ಸೇರಿದಂತೆ ಪಕ್ಷದ ಮುಖಂಡರು ಆಗಮಿಸಲಿದ್ದಾರೆ ಎಂದು ತಿಳಿಸಿದರು.

ಜಿಲ್ಲಾ ಪ್ರಧಾನ ಕಾರ್ಯದರ್ಶಿ ಜೆ. ಅಮಾನುಲ್ಲಾ ಖಾನ್, ಟಿ.ಅಜ್ಗರ್ ಮಾತನಾಡಿದರು. ಪತ್ರಿಕಾಗೋಷ್ಠಿಯಲ್ಲಿ ಜಮೀರ್ ಅಹ್ಮದ್, ಧನಂಜಯ್, ರಫೀಕ್ ಸೇಠ್, ಜಮೀವುಲ್ಲಾ, ಶ್ರೀನಿವಾಸ್, ಆಜಂ ರಜ್ವಿ ಇತರರು ಉಪಸ್ಥಿತರಿದ್ದರು.

ನಗರಕ್ಕೆ ಇಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಇಂದು ನಗರಕ್ಕೆ ಭೇಟಿ ನೀಡಲಿದ್ದಾರೆ. ಬೆಳಿಗ್ಗೆ ಬೆಂಗಳೂರಿನಿಂದ ಹೊರಟು ತುಮಕೂರು-ಚಿತ್ರದುರ್ಗ ಮಾರ್ಗವಾಗಿ ಬೆಳಿಗ್ಗೆ10.30 ಕ್ಕೆ ನಗರಕ್ಕೆ ಆಗಮಿಸುವರು. ಬೆಳಿಗ್ಗೆ 11 ಗಂಟೆಗೆ ಜಿಲ್ಲಾಧಿಕಾರಿ ಕಚೇರಿಯಲ್ಲಿ ಸಂವಿಧಾನ ದಿವಸ ಆಚರಣೆ ಅಂಗವಾಗಿ, ಭಾರತ ಸಂವಿಧಾನದ ಪ್ರಸ್ತಾವನೆ ಓದುವ ಕಾರ್ಯಕ್ರಮದಲ್ಲಿ ಭಾಗವಹಿಸುವರು.

ಬೆಳಿಗ್ಗೆ 11.30 ಕ್ಕೆ ಎಸ್.ಎಸ್. ಕಲ್ಯಾಣ ಮಂಟಪದಲ್ಲಿ ಶಾಸಕ ಎಸ್.ಎ.ರವೀಂದ್ರನಾಥ್ ಅವರ ಅಮೃತ ಮಹೋತ್ಸವ ಅಭಿನಂದನಾ ಸಮಾರಂಭದಲ್ಲಿ ಮುಖ್ಯಮಂತ್ರಿಗಳು ಭಾಗವಹಿಸುವರು. ನಂತರ ಮಧ್ಯಾಹ್ನ 3 ಗಂಟೆಗೆ ಚಿತ್ರದುರ್ಗಕ್ಕೆ ತೆರಳುವರು.

ನಗರದಲ್ಲಿ ಇಂದು ರಕ್ತದಾನ ಶಿಬಿರ

ಶಾಸಕ ಎಸ್.ಎ. ರವೀಂದ್ರನಾಥ್ ಅವರ 76ನೇ ಹುಟ್ಟು ಹಬ್ಬವನ್ನು ನಿಟ್ಟುವಳ್ಳಿಯ ಎಸ್.ಎ. ರವೀಂದ್ರನಾಥ್ ಅಭಿಮಾನಿ ಬಳಗದಿಂದ ಆಚರಿಸಲಾಗುತ್ತಿದೆ. ಇಂದು ಬೆಳಿಗ್ಗೆ 10.30 ಕ್ಕೆ ಜಿಲ್ಲಾ ಚಿಗಟೇರಿ ಸಾರ್ವಜನಿಕ ಆಸ್ಪತ್ರೆಯಲ್ಲಿ ಸ್ವಯಂ ಪ್ರೇರಿತ ರಕ್ತದಾನ ಶಿಬಿರ ಏರ್ಪಡಿಸಲಾಗಿದೆ ಎಂದು 32ನೇ ವಾರ್ಡಿನ ಕಾರ್ಯಕರ್ತರಾದ ಎಂ. ಮುರುಗೇಶ್ ಕೋರಿದ್ದಾರೆ.

ಕೊಡದಗುಡ್ಡದ ವೀರಭದ್ರ ಸ್ವಾಮಿ ಕಾರ್ತಿಕ

ಜಗಳೂರು, ನ.25- ತಾಲ್ಲೂಕಿನ ಕೊಡದಗುಡ್ಡದ ಶ್ರೀ ವೀರಭದ್ರಸ್ವಾಮಿ ದೇವಸ್ಥಾನದಲ್ಲಿ ಇಂದಿನಿಂದ ಡಿಸೆಂಬರ್ 21 ರ ಮಂಗಳವಾರದವರೆಗೆ ವಿಶೇಷ ಪೂಜೆಗಳು ನಡೆಯಲಿವೆ.

ಡಿ. 21ರ ಮಂಗಳವಾರ ಬಸವನ ಪೂಜೆ ಮತ್ತು ಅದೇ ದಿನ ರಾತ್ರಿ 7.30 ರಿಂದ ರಾತ್ರಿ 11 ರವರೆಗೆ ಶ್ರೀ ವೀರಭದ್ರೇಶ್ವರ ಸ್ವಾಮಿಯ ಬೆಳ್ಳಿ ಪಲ್ಲಕ್ಕಿ ಮಹೋತ್ಸವ ನಡೆಯಲಿದೆ.

76ರ ಹೊಸ್ತಿಲಲ್ಲಿ
ನನ್ನ ಪ್ರೀತಿಯ ರವಿಮಾಮ
ನನ್ನ ರಾಜಕೀಯ ಗುರುಗಳು,
ಮಾರ್ಗದರ್ಶಕರು,
ದೀನ-ದಲಿತರ ಆಶಾಕಿರಣ,
ಬಡವರ ಬಂಧು,
ಎಲ್ಲಾ ಪಕ್ಷಗಳ ನಾಯಕರು ಮೆಚ್ಚುವಂತಹ
ಅತ್ಯುದ್ಭುತ ಗುಣವುಳ್ಳವರು, ರಾಜಕೀಯದಲ್ಲಿನ
ಏಳು-ಬೀಳುಗಳನ್ನು ಸಮಾನವಾಗಿ
ಸ್ವೀಕರಿಸಿದವರು, ಕರ್ನಾಟಕದ ಎಲ್ಲಾ ಮಠಗಳ
ಗುರುಗಳ ಆಶೀರ್ವಾದದ ಸವಿ ಉಂಡವರು,
ರೈತರ ಕೂಗಿಗೆ ತಕ್ಷಣ ಸ್ಪಂದಿಸುವವರು,
ಮಾಜಿ ಸಚಿವರು, ದಾವಣಗೆರೆ ಉತ್ತ

ಹುಟ್ಟುಹಬ್ಬದ ಶುಭಾಶಯಗಳು
ಇಂದು ತಮ್ಮ 76ನೇ ಜನ್ಮದಿನದ ಸಂಭ್ರಮದಲ್ಲಿರುವ
ಮಾಜಿ ಸಚಿವರೂ, ದಾವಣಗೆರೆ ಉತ್ತರ ವಿಧಾನಸಭಾ
ಕ್ಷೇತ್ರದ ಜನಪ್ರಿಯ ಶಾಸಕರೂ ಆದ ಅಜಾತ ಶತ್ರು, ರೈತ ಮಿತ್ರ
ಶ್ರೀ ಎಸ್.ಎ. ರವೀಂದ್ರನಾಥ್
ಅವರಿಗೆ ಹುಟ್ಟುಹಬ್ಬದ ಶುಭಾಶಯಗಳು
ಶ್ರೀಯುತರಿಗೆ ಆರೋಗ್ಯ, ಐಶ್ವರ್ಯ, ನೆಮ್ಮದಿಯನ್ನು
ಕರುಣಿಸಲಿ ಎಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.
ದೇವರಮನೆ
ಶಿವಕುಮಾರ್
ಅಧ್ಯಕ್ಷರು, ದಾವಣಗೆರೆ-ಹರಿಹರ
ನಗರಾಭಿವೃದ್ಧಿ ಪ್ರಾಧಿಕಾರ, ದಾವಣಗೆರೆ.
ಶುಭ ಕೋರುವವರು : ಅಧ್ಯಕ್ಷರು ಮತ್ತು ಸದಸ್ಯರು
ದಾವಣಗೆರೆ-ಹರಿಹರ ನಗರಾಭಿವೃದ್ಧಿ ಪ್ರಾಧಿಕಾರ, ದಾವಣಗೆರೆ.

ಕೆಲಸಕ್ಕೆ ಬೇಕಾಗಿದ್ದಾರೆ
'ನಿರ್‌ವಿನ್ಸ್ ಕೆಫೆ'ಯಲ್ಲಿ ಕೆಲಸ ಮಾಡಲು ಉತ್ಸಾಹಿ ಯುವಕ-ಯುವತಿಯರು ಬೇಕಾಗಿದ್ದಾರೆ. ವಯಸ್ಸು : 18 ರಿಂದ 30. ಬೇಕರಿಯಲ್ಲಿ ಕೆಲಸ ಮಾಡಿದವರಿಗೆ ಹೆಚ್ಚಿನ ಆದ್ಯತೆ ನೀಡಲಾಗುವುದು. ವಿದ್ಯಾರ್ಹತೆ : ಪಿಯುಸಿ ಪಾಸ್ / ಫೇಲ್.
ಮೊ. 93804 69079

ಸೈಟು ಮಾರಾಟಕ್ಕಿದೆ
25x40ಅಳತೆಯ 2 ಸೈಟುಗಳು ಆಂಜನೇಯ ದೇವಸ್ಥಾನ ರಸ್ತೆ, ನವತರಂಗ ಶಾಲೆ ಎದುರು, ಚಿಕ್ಕನಹಳ್ಳಿ ಹೊಸ ಬಡಾವಣೆ ನಿಟುವಳ್ಳಿ, ದಾವಣಗೆರೆ.
86608 09919, 99019 26644

ಸೈಟ್, ಮನೆ ಮಾರಾಟಕ್ಕೆ
ಡಾಲರ್ಸ್ ಕಾಲೋನಿ, ಶಿವ ಪಾರ್ವತಿ, ಜೆ.ಹೆಚ್. ಪಟೇಲ್ ಬಡಾವಣೆ (ಸುತ್ತಮುತ್ತ) ಶಿವ ಪಾರ್ವತಿ : 30x50 ಪೂರ್ವ. 30x40 ಕಾರ್ನರ್ 40x60, 30x50 ಡ್ಯೂಪ್ಲೆಕ್ಸ್. JHP : 30x40 ಹೊಸ ಮನೆ 30x50 ಮನೆ 30x45 ಉತ್ತರ, 30x40 ಪೂರ್ವ ಸೈಟ್. ಡಾಲರ್ಸ್ ಕಾಲೋನಿ : 60x90, 60x50, 40x70, 30x37, 30x39, 40x60 ಇನ್ನು ಅನೇಕ
ಕಿರಣ್ ಬೂಸ್ನೂರ್
98440 63409, 97315 63409

ಬೇಕಾಗಿದ್ದಾರೆ
ಆಸ್ಪತ್ರೆ / ನರ್ಸಿಂಗ್ ಹೋಂನಲ್ಲಿ ಕೆಲಸ ಮಾಡಲು ಸುರಿತ ನರ್ಸ್‌ಗಳು, ಅನುಭವವುಳ್ಳ ಎ.ಎನ್.ಎಂ ಆದವರು ಬಯೋಡೇಟಾದೊಂದಿಗೆ ವಿಚಾರಿಸಿ.
ಸ್ವೇಡಿಯಂ ಹತ್ತಿರ, ಪಿ.ಜೆ.ಬಡಾವಣೆ, ಸಿ.ಜಿ. ಆಸ್ಪತ್ರೆ ಹಿಂಭಾಗ, ಪೆವಿಲಿಯನ್ ರಸ್ತೆ, ದಾವಣಗೆರೆ.
99024-52312, 98450-35710

ಬೇಕಾಗಿದ್ದಾರೆ
ದಾವಣಗೆರೆ ಸಮೀಪ ಹೊಲದಲ್ಲಿ ಇದ್ದುಕೊಂಡೇ ಕೆಲಸ ಮಾಡಲು ಮತ್ತು ಆಕಳು ನೋಡಿಕೊಳ್ಳಲು ಆಳು ಬೇಕಾಗಿದ್ದಾರೆ.
70185 88900
95388 70257

ಮನೆ ಮಾರಾಟಕ್ಕಿದೆ
#2427/A,10th Main, 2nd Cross, M. C.C 'A' Block, Davangere-02. 60x30ft.
ಸಂಪರ್ಕಿಸಿ:
74835 88932
98454 58294

ಬೇಕಾಗಿದ್ದಾರೆ
ಮೆಡಿಹೌಸ್ ಔಷಧಿ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗರು ಮತ್ತು ಹುಡುಗಿಯರು ಬೇಕಾಗಿದ್ದಾರೆ.
P U C or any DEGREE.
ವಿಳಾಸ : ಕಾವೇರಿ ಫಾರ್ಮಾ, ಚೇತನಾ ಹೋಟೆಲ್ ಹತ್ತಿರ, ದಾವಣಗೆರೆ-577002

WANTED
Receptionist for
R Empire Hotel,
Shamanur Road, Davangere.
Contact : 94487 51313

ಸೈಟು ಮಾರಾಟಕ್ಕಿದೆ
ಅಳತೆ 50x 80 ಬನಶಂಕರಿ ಬಡಾವಣೆ ಸೈಟ್ ನಂ. 8, # 4081 ಬೈಪಾಸ್, ಸಂಪರ್ಕಿಸಿರಿ ಮಧ್ಯವರ್ತಿಗಳಿಗೆ ಅವಕಾಶವಿಲ್ಲ
95380 55959

ಶಿಕ್ಷಕರು ಬೇಕಾಗಿದ್ದಾರೆ
ದಾವಣಗೆರೆ ಜಿಲ್ಲೆ ಚನ್ನಗಿರಿ ತಾಲ್ಲೂಕಿನ ತ್ಯಾವಣಿಗಿಯಲ್ಲಿರುವ ಮಂದಾರ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಹಿಂದಿ, ವಿಜ್ಞಾನ, ಗಣಿತ ಮತ್ತು ಇಂಗ್ಲಿಷ್ ವಿಷಯಗಳಿಗೆ ಸುರಿತ ಶಿಕ್ಷಕರುಗಳು ಬೇಕಾಗಿದ್ದಾರೆ. ಸಂಪರ್ಕಿಸಿ
91481 41665

ಬೇಕಾಗಿದ್ದಾರೆ
ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು 3 ವರ್ಷಗಳ ಅನುಭವವಿರುವ ಸೇಲ್ಸ್ ಮನ್ / ಸೇಲ್ಸ್ ಗರ್ಲ್ಸ್ ಬೇಕಾಗಿದ್ದಾರೆ.
ಸಂಪರ್ಕಿಸಿ: ಆಮಂತ್ರಣ ವಿಜಯಲಕ್ಷ್ಮಿ ರಸ್ತೆ, ದಾವಣಗೆರೆ.
97400 01117

ಮಾರ್ಕ್ಸ್ ಕಾರ್ಡ್ ಕಳೆದಿದೆ
ಎಂ ಮಧುಸೂದನ್ ಹೆಸರಿನ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಮಾರ್ಕ್ಸ್‌ಕಾರ್ಡ್‌ಗಳು ಮೋಟಾರ್ ಬೈಕ್‌ನಲ್ಲಿ ಬರುವಾಗ ದಾರಿಯಲ್ಲಿ ಕಳೆದಿವೆ. ಸಿಕ್ಕವರು ಮೊಬೈಲ್ ನಂಬರ್ 74110 38856 ಇಲ್ಲಿಗೆ ಸಂಪರ್ಕಿಸಿ, ತಲುಪಿಸಲು ಕೋರಿದೆ.

ನೇರ ಪರೀಕ್ಷೆಗಳು
SSLC - 7,8,9/10 ಪಾಸ್/ಫೇಲ್, ಡಿಪ್ಲೋಮಾ ಇನ್ ಪೇಷೆಂಟ್ ಕೇರ್ ನರ್ಸಿಂಗ್ ರೆಗ್ಯುಲರ್ NTC- ನರ್ಸರಿ ಟೀಚರ್ಸ್ ಟ್ರೈನಿಂಗ್, BA, B.Com., B.Sc., MA, M.Com., M.Sc.,
ಶ್ರೀ ಗಂಗೋತ್ರಿ ಎಜು ಟ್ರಸ್ಟ್, ಲಾಯರ್ ರೋಡ್, ದಾವಣಗೆರೆ. 86602 35013

ಭಟ್ಟರು ಬೇಕಾಗಿದ್ದಾರೆ
ಹೋಟೆಲ್‌ಗೆ ಅಡುಗೆ ಮಾಡಲು ಭಟ್ಟರು (ನಾರ್ತ್ ಇಂಡಿಯನ್) ಬೇಕಾಗಿದ್ದಾರೆ. ಆಕರ್ಷಕ ಸಂಬಳ ಕೊಡಲಾಗುವುದು.
ಸಂಪರ್ಕಿಸಿ : 86604 66960
90086 84804

ಕಮರ್ಷಿಯಲ್ ಬಿಲ್ಡಿಂಗ್ ಬಾಡಿಗೆಗೆ ಇದೆ
ಮೊದಲನೆ ಮಹಡಿ 3500 ಚ. ಅಡಿ, ಗ್ರೌಂಡ್ ಫ್ಲೋರ್ ನಲ್ಲಿ 3100 ಚ.ಅ. ಇರುವ ಎಸ್. ಎಸ್. ಬಡಾವಣೆ,'ಬಿ' ಬ್ಲಾಕ್, 120 ಅಡಿ ರಸ್ತೆಗೆ ಹೊಂದಿ ಕೊಂಡಿರುವ ಬಿಲ್ಡಿಂಗ್ ಹಾಸ್ಪಲ್ ಗೆ ಬಾಡಿಗೆಗೆ ಇದೆ
99804 46918
91135 60169

ಅಣಬೆಗಳು ದೊರೆಯುತ್ತವೆ
ರಕ್ತದೊತ್ತಡ ಮತ್ತು ಡಯಾಬಿಟಿಸ್ ಹಾಗೂ ಹೃದಯ ಸಂಬಂಧಿರೋಗ ನಿಯಂತ್ರಣಕ್ಕೆ ಅಗತ್ಯ ಪೋಷಕಾಂಶಗಳುಳ್ಳ ಅಣಬೆಗಳು ಡಿ.ಸಿ.ಎಂ. ಟೌನ್‌ಶಿಪ್‌ನಲ್ಲಿ ದೊರೆಯುತ್ತವೆ. ಸಂಪರ್ಕಿಸಿ
08192 255433

ಬೇಕಾಗಿದ್ದಾರೆ
ಹೊಳಲ್ಕೆರೆ ತಾಲ್ಲೂಕು ಅಡಿಕೆ ತೋಟದಲ್ಲಿ ಕೆಲಸ ಮಾಡಲು ಒಂದು ಕುಟುಂಬ ಬೇಕಾಗಿದೆ. ಕೂಡಲೇ ಸಂಪರ್ಕಿಸಿ.
94484 39639, 63665 96479

WANTED LADY STAFF
B.E -03, B.Sc-03, B.Com/M.Com-03, BBM/MBA-03
For Office Work-02
M: 97425 18228

ಮಲೇಬೆನ್ನೂರಿನಲ್ಲಿ ಹೆದ್ದಾರಿಗೆ ಬ್ಯಾರಿಕೇಡ್ ಅಳವಡಿಕೆ

ಮಲೇಬೆನ್ನೂರು, ನ.25- ಇಲ್ಲಿನ ಸಮುದಾಯ ಆರೋಗ್ಯ ಕೇಂದ್ರದ ಎದುರು ಇರುವ ಸರ್ಕಾರಿ ಉರ್ದು ಪ್ರೌಢ ಮತ್ತು ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳು ಹೆದ್ದಾರಿ ದಾಟಲು ಅನುಕೂಲವಾಗುವಂತೆ ಪೊಲೀಸರು 4 ಬ್ಯಾರಿಕೇಡ್ ವ್ಯವಸ್ಥೆ ಮಾಡಿದ್ದಾರೆ.

2 ಶಾಲೆಗಳ ಎಸ್‌ಡಿಎಂಸಿ ಪದಾಧಿಕಾರಿಗಳು ಹಾಗೂ ಶಿಕ್ಷಕರು ಹೆದ್ದಾರಿಗೆ ಬ್ಯಾರಿಕೇಡ್ ಹಾಕಿ ರಸ್ತೆ ಸುರಕ್ಷತಾ ಕ್ರಮ ವಹಿಸುವಂತೆ ಪತ್ರದ ಮೂಲಕ ಇಲ್ಲಿನ ಪೊಲೀಸ್ ಠಾಣೆಗೆ ಮನವಿ ಮಾಡಿದ್ದರು.

ಮನವಿಗೆ ಸ್ಪಂದಿಸಿದ ಪಿಎಸ್‌ಐ ರವಿಕುಮಾರ್ ಹಾಗೂ ಪ್ರೊಬೇಷನರಿ ಪಿಎಸ್‌ಐ ಪಾಂಡುರಂಗ ಅವರು ಗುರುವಾರ ಬೆಳಿಗ್ಗೆ ಶಾಲೆ ಪ್ರಾರಂಭಕ್ಕೂ ಮೊದಲು ಹೆದ್ದಾರಿಗೆ ಬ್ಯಾರಿಕೇಡ್ ಹಾಕಿ ವಾಹನಗಳ ವೇಗವನ್ನು ನಿಯಂತ್ರಣಗೊಳಿಸಿ, ವಿದ್ಯಾರ್ಥಿಗಳಿಗೆ ಅನುಕೂಲ ಮಾಡಿಕೊಟ್ಟರು.

ಇದಕ್ಕಾಗಿ ಶ್ರಮಿಸಿದ ಉದ್ಯಮಿ ಸೈಯದ್ ರೋಷನ್ ಮತ್ತು ಪ್ರೊಬೇಷನರಿ ಪಿಎಸ್‌ಐ ಪಾಂಡುರಂಗ ಅವರನ್ನು ಸರ್ಕಾರಿ ಉರ್ದು ಪ್ರೌಢ ಮತ್ತು ಪ್ರಾಥಮಿಕ ಶಾಲೆಗಳ ವತಿಯಿಂದ ಸನ್ಮಾನಿಸಿ, ಅಭಿನಂದಿಸಿದರು.

ಪ್ರೌಢಶಾಲೆಯ ಎಸ್‌ಡಿಎಂಸಿ ಅಧ್ಯಕ್ಷ ಸೈಯದ್ ಸಾಬೀರ್ ಅಲಿ, ಪ್ರಾಥಮಿಕ ಶಾಲೆಯ ಎಸ್‌ಡಿಎಂಸಿ ಅಧ್ಯಕ್ಷ ಬರ್ಕತ್ ಅಲಿ, ಸರ್ಕಾರಿ ಪ.ಪೂ. ಕಾಲೇಜಿನ ಎಸ್‌ಬಿಸಿ ಉಪಾಧ್ಯಕ್ಷ ಮೀರ್ ಆಜಂ, ಪ್ರೌಢಶಾಲೆ ಮುಖ್ಯ ಶಿಕ್ಷಕಿ ಶ್ರೀಮತಿ ರಾಜೇಶ್ವರಿ, ಹಿರಿಯ ಶಿಕ್ಷಕ ರೇವಣಸಿದ್ದಪ್ಪ ಅಂಗಡಿ, ಬಸವಾಪಟ್ಟಣದ ಶಿಕ್ಷಕ ಹಾಗೂ ಕನ್ನಡಪರ ಯುವ ಚಿಂತಕ ಎಲ್.ಜಿ. ಮಧುಕುಮಾರ್, ಚನ್ನಗಿರಿ ತಾಲ್ಲೂಕು ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಇಜಾಜ್ ಅಹಮದ್ ಮತ್ತು ಕುಂಬಳೂರು ವಾಸು ಈ ವೇಳೆ ಹಾಜರಿದ್ದರು.

ದೇಶದಲ್ಲೀಗ ಪುರುಷರಿಗಿಂತ ಮಹಿಳೆಯರ ಸಂಖ್ಯೆ ಹೆಚ್ಚು

ನವದೆಹಲಿ, ನ. 25 – ದೇಶದಲ್ಲಿ ಲಿಂಗಾನುಪಾತದಲ್ಲಿ ಬದಲಾವಣೆಯಾಗಿದ್ದು, ದೇಶದಲ್ಲೀಗ ಪುರುಷರಿಗಿಂತ ಮಹಿಳೆಯರ ಸಂಖ್ಯೆ ಹೆಚ್ಚಾಗಿದೆ ಎಂದು ರಾಷ್ಟ್ರೀಯ ಕುಟುಂಬ ಹಾಗೂ ಆರೋಗ್ಯ ಸಮೀಕ್ಷೆ (ಎನ್.ಎಫ್.ಹೆಚ್.ಎಸ್. -5) ಸಮೀಕ್ಷೆ ತಿಳಿಸಿದೆ.

ದೇಶದಲ್ಲಿ ಪ್ರತಿ ಸಾವಿರ ಗಂಡಸರಿಗೆ, 1020 ಮಹಿಳೆಯರಿದ್ದಾರೆ. ಭಾರತ ಲಿಂಗಾನುಪಾತದಲ್ಲಿ ಅಭಿವೃದ್ಧಿ ಹೊಂದಿದ ದೇಶಗಳ ಸಾಲಿಗೆ ಬರುತ್ತಿದೆ ಎಂದು ಆರೋಗ್ಯ ಸಚಿವಾಲಯದ ಅಧಿಕಾರಿಗಳು ಹೇಳಿದ್ದಾರೆ.

2015-16ರಲ್ಲಿ ಗಂಡು ಮಕ್ಕಳಿಗೆ ಹೋಲಿಸಿದರೆ ಹೆಣ್ಣು ಮಕ್ಕಳ ಜನನ ಪ್ರಮಾಣ ಸಾವಿರಕ್ಕೆ 919 ಇತ್ತು. ಇದು 2019-20ರ ವೇಳೆಗೆ 929ಕ್ಕೆ ಹೆಚ್ಚಾಗಿದೆ. ಲಿಂಗ ಪತ್ತೆ ಮಾಡುವುದನ್ನು ತಡೆಯುವುದೂ ಸೇರಿದಂತೆ ಹಲವಾರು ಕ್ರಮಗಳಿಂದಾಗಿ ಲಿಂಗಾನುಪಾತ ಹೆಚ್ಚಾಗಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ರಾಣೇಬೆನ್ನೂರಿನಲ್ಲಿ ಡಿಜಿಟಲ್ ಸೇವಾ ಕೇಂದ್ರ ಪ್ರಾರಂಭ

ರಾಣೇಬೆನ್ನೂರು, ನ. 25- ಕೇಂದ್ರ ಮತ್ತು ರಾಜ್ಯ ಸರ್ಕಾರದ ವಿವಿಧ ಯೋಜನೆಗಳ ಪ್ರಯೋಜನ ಪಡೆಯಲು ಅರ್ಜಿ ಸಲ್ಲಿಸಲು ಜನ ಸಾಮಾನ್ಯರಿಗೆ ಅನುಕೂಲವಾಗುವಂತೆ ಕೇಂದ್ರ ಸರ್ಕಾರ ಡಿಜಿಟಲ್ ಸಾಮಾನ್ಯ ಸೇವಾ ಕೇಂದ್ರವನ್ನು ಇಲ್ಲಿನ ತಾಲ್ಲೂಕು ಕಛೇರಿಯಲ್ಲಿ ಶ್ರೀ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ. ಟ್ರಸ್ಟ್ ಸಂಸ್ಥೆಯಿಂದ ಆರಂಭಿಸಲಾಯಿತು.

ವಾ.ಕ.ರ.ಸಾ.ಸಂಸ್ಥೆ ಹುಬ್ಬಳ್ಳಿ ವಿಭಾಗದ ಉಪಾಧ್ಯಕ್ಷ ಡಾ. ಬಸವರಾಜ ಕೇಲಗಾರ ಸೇವಾ ಕೇಂದ್ರ ಉದ್ಘಾಟಿಸಿ ಮಾತನಾಡುತ್ತಿದ್ದರು.

ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಜಿಲ್ಲಾ ನಿರ್ದೇಶಕ ನಾಗರಾಜ ಶೆಟ್ಟಿ ಮಾತನಾಡಿ, ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಗೆ ಕೇಂದ್ರ ಸರ್ಕಾರ ಒಪ್ಪಂದ ಮಾಡಿಕೊಂಡಿದ್ದು, ಕೇಂದ್ರ ಮತ್ತು ರಾಜ್ಯ ಸರ್ಕಾರದ ಹಲವು ಸೇವೆಗಳು, ಈ ಯೋಜನೆಯಲ್ಲಿ ಲಭ್ಯವಿವೆ. ಆಧಾರ್ ಕಾರ್ಡ್, ರೇಶನ್ ಕಾರ್ಡ್, ಈ ಶ್ರಮ್ ಕಾರ್ಡ್, ಪ್ರಧಾನಮಂತ್ರಿ ಕಿಸಾನ್ ಸಮ್ಮಾನ್ ಯೋಜನೆ, ಜಾತಿ, ಆದಾಯ ಸೇರಿದಂತೆ ಗ್ರಾಮೀಣ ಭಾಗದ ಪಿಂಚಣಿ ಯೋಜನೆ ಸೇರಿದಂತೆ ಈ ಸೇವಾ ಕಾರ್ಯವನ್ನು ಗ್ರಾಮೀಣ ಪ್ರದೇಶಗಳಿಗೆ ತಲುಪಿಸುವ ಕೆಲಸವನ್ನು ನಮ್ಮ ಕಾರ್ಯಕರ್ತರು ಮಾಡಲಿದ್ದಾರೆ ಎಂದು ತಿಳಿಸಿದರು.

ತಾಲ್ಲೂಕು ಯೋಜನಾಧಿಕಾರಿ ಸತೀಶ್ ಶೇಟ್ ಉಪಸ್ಥಿತರಿದ್ದರು.

ವೈದ್ಯಕೀಯ : ಆರ್ಥಿಕ ಮೀಸಲಾತಿ ಪರಿಶೀಲನೆ

(1ನೇ ಪುಟದಿಂದ) ವಾರ ಮುಂದೂಡಲಾಗುವುದು ಎಂದು ಮೆಹ್ತಾ ತಿಳಿಸಿದ್ದಾರೆ.

ಜುಲೈ 29ರಂದು ನೋಟಿಸ್ ಕಳಿಸಿದ್ದ ಕೇಂದ್ರ ಮತ್ತು ವೈದ್ಯಕೀಯ ಕೌನ್ಸಿಲಿಂಗ್ ಸಮಿತಿ (ಎಂ.ಸಿ.ಸಿ.) ಇತರೆ ಹಿಂದುಳಿದ ವರ್ಗಗಳಿಗೆ ಶೇ.27 ಹಾಗೂ ಆರ್ಥಿಕವಾಗಿ ಹಿಂದುಳಿದ ವರ್ಗಗಳಿಗೆ ಶೇ.10ರಷ್ಟು ಮೀಸಲಾತಿ ಕಲ್ಪಿಸುವುದಾಗಿ ತಿಳಿಸಿತ್ತು. ಇದನ್ನು ಪ್ರಶ್ನಿಸಿ ಹಲವು ವಿದ್ಯಾರ್ಥಿಗಳು ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿದ್ದರು.

ಆರ್ಥಿಕ ಮೀಸಲಾತಿ ಸಬಲೀಕರಣ ಗೊಳಿಸುವ ಹಾಗೂ ಪ್ರಗತಿಪರ ಮೀಸಲಾತಿಯಾಗಿದೆ. ಎಲ್ಲಾ ರಾಜ್ಯಗಳು ಈ ದಿಸೆಯಲ್ಲಿ ಕೇಂದ್ರಕ್ಕೆ ಬೆಂಬಲಿಸಬೇಕು ಎಂದು ನ್ಯಾಯಮೂರ್ತಿ ಕಾಂತ್ ಹೇಳಿದ್ದಾರೆ.

ಈ ವರ್ಗದ ಆರ್ಥಿಕ ಮಿತಿಯನ್ನು ವೈಜ್ಞಾನಿಕವಾಗಿ ನಿರ್ಧರಿಸಬೇಕು ಎಂಬುದೇ ಈಗಿರುವ ಏಕೈಕ ಪ್ರಶ್ನೆಯಾಗಿದೆ. ಈ ಹಿಂದೆ ನಿಗದಿ ಪಡಿಸಿರುವ ಮಾನದಂಡ ವನ್ನು ಪುನರ್ ಪರಿಶೀಲಿಸಲು ಸರ್ಕಾರ ಮುಂದಾಗಿರುವುದು ಸೂಕ್ತವಾಗಿದೆ ನ್ಯಾಯಾಲಯ ಹೇಳಿದೆ.

ಅರ್ಜಿದಾರರಾಗಿರುವ ವಿದ್ಯಾರ್ಥಿಗಳ ಪರವಾಗಿ ಹಾಜರಿದ್ದ ಹಿರಿಯ ವಕೀಲ ಅರವಿಂದ್ ದಾತಾರ್, ಈಗಾಗಲೇ ಸಾಕಷ್ಟು ಸಮಯ ಮೀರಿದೆ. ಕೇಂದ್ರ ಸರ್ಕಾರ ಆರ್ಥಿಕವಾಗಿ ಹಿಂದುಳಿದ ವರ್ಗಗಳ ಮೀಸಲಾತಿಯನ್ನು ಮುಂದಿನ ವರ್ಷಕ್ಕೆ ಮುಂದೂಡಬೇಕು. ಈ ವರ್ಷ ಕೌನ್ಸೆಲಿಂಗ್ ಕೈಗೊಳ್ಳಬೇಕು ಎಂದು ವಾದ ಮಂಡಿಸಿದರು.

ಈ ಬಗ್ಗೆ ನ್ಯಾಯಾಲಯ ಪ್ರಶ್ನಿಸಿದಾಗ ಉತ್ತರಿಸಿದ ಮೆಹ್ತ, ಸರ್ಕಾರ ಈಗಾಗಲೇ ಮೀಸಲಾತಿಯನ್ನು ಪ್ರಸಕ್ತ ಶೈಕ್ಷಣಿಕ ವರ್ಷದಿಂದಲೇ ಜಾರಿಗೆ ತರಲು ನಿರ್ಧರಿಸಿದೆ. ಆದಾಯ ಮಿತಿಯನ್ನು ನಾಲ್ಕು ವಾರಗಳಲ್ಲೇ ನಿರ್ಧರಿಸಿ ನ್ಯಾಯಾಲಯಕ್ಕೆ ಸಲ್ಲಿಸಲಾಗುವುದು ಎಂದು ಹೇಳಿದರು.

ಇದಕ್ಕೆ ಸಮ್ಮತಿಸಿದ ನ್ಯಾಯಾಲಯ, ನಾಲ್ಕು ವಾರಗಳ ಗಡುವು ನೀಡಿದೆ.

ದೆಹಲಿ ಮೆಟ್ರೋದಲ್ಲಿ ಚಾಲಕ ರಹಿತ ರೈಲು

ನವದೆಹಲಿ, ನ. 25 - ದೆಹಲಿ ಮೆಟ್ರೋದ 59 ಕಿ.ಮೀ. ಉದ್ದದ ಪಿಂಕ್ ಲೇನ್‌ನಲ್ಲಿ ಚಾಲಕ ರಹಿತ ರೈಲುಗಳ ಕಾರ್ಯ ನಿರ್ವಹಣೆಗೆ ಗುರುವಾರ ಚಾಲನೆ ನೀಡಲಾಗಿದೆ. ವಿಶ್ವದಲ್ಲೇ ಈ ತಂತ್ರಜ್ಞಾನ ಬಳಸುತ್ತಿರುವ ನಾಲ್ಕನೇ ದೇಶ ಭಾರತವಾಗಿದೆ. ಸಿಂಗಪುರ, ಶಾಂಘೈ ಹಾಗೂ ಕೌಲಾಲಂಪುರಗಳು ಈಗಾಗಲೇ ಚಾಲಕ ರಹಿತ ರೈಲು ಜಾಲಗಳನ್ನು ಹೊಂದಿವೆ.

ಕೇಂದ್ರ ವಸತಿ ಮತ್ತು ನಗರಾಭಿವೃದ್ಧಿ ಸಚಿವ ಹರ್‌ದೀಪ್ ಸಿಂಗ್ ಪುರಿ ಹಾಗೂ ದೆಹಲಿ ಸಾರಿಗೆ ಸಚಿವ ಕೈಲಾಶ್ ಗೆಹ್ಲೋಟ್ ಅವರು ಗುರುವಾರ ಜಂಟಿಯಾಗಿ ಚಾಲಕ ರಹಿತ ರೈಲು ಕಾರ್ಯಾಚರಣೆಗೆ ಚಾಲನೆ ನೀಡಿದ್ದಾರೆ.

ದೇಶದಲ್ಲಿ ಜನಸಂಖ್ಯಾ ಸ್ಫೋಟ ಮುಗಿದಿದೆ

ಎನ್‌ಹೆಚ್‌ಎಫ್‌ಎಸ್ - 5 ಸಮೀಕ್ಷೆಯಲ್ಲಿ ಜನನ ದರ ಶೇ.2ಕ್ಕೆ ಇಳಿಕೆ : ಪಿಎಫ್‌ಐ

ನವದೆಹಲಿ, ನ. 25 - ಎನ್‌ಹೆಚ್‌ಎಫ್‌ಎಸ್ - 5 ಸಮೀಕ್ಷೆಯ ಪ್ರಕಾರ ದೇಶದಲ್ಲಿ ಒಟ್ಟಾರೆ ಫಲವತ್ತತೆ ದರ ಶೇ.2.0ಕ್ಕೆ ಇಳಿದಿದೆ. ಇದು ದೇಶದಲ್ಲಿ ಜನಸಂಖ್ಯಾ ಸ್ಫೋಟ ಅಂತ್ಯವಾಗಿದೆ ಎಂಬುದನ್ನು ತೋರಿಸುತ್ತದೆ ಎಂದು ಪಾಪ್ಯುಲೇಷನ್ ಫೌಂಡೇಷನ್ ಆಫ್ ಇಂಡಿಯಾ (ಪಿ.ಎಫ್.ಐ.) ತಿಳಿಸಿದೆ.

ಪ್ರತಿ ಮಹಿಳೆಗೆ ಜನಿಸುವ ಸರಾಸರಿ ಮಕ್ಕಳ ಸಂಖ್ಯೆಯನ್ನು ಒಟ್ಟಾರೆ ಫಲವತ್ತತೆ ದರ (ಟಿ.ಎಫ್.ಆರ್.) ಎಂದು ಪರಿಗಣಿಸಲಾಗುತ್ತದೆ. ಈಗಿರುವ ಜನಸಂಖ್ಯೆಯನ್ನೇ ಕಾಯ್ದುಕೊಳ್ಳಲು ಟಿ.ಎಫ್.ಆರ್. ದರ ಶೇ.2.1 ಇರಬೇಕಿದೆ. ಇದಕ್ಕಿಂತ ಕಡಿಮೆ ದರ ಇದ್ದರೆ ಜನಸಂಖ್ಯೆ ಇಳಿಮುಖವಾಗುತ್ತದೆ.

ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ (ಎನ್.ಹೆಚ್.ಎಫ್.ಎಸ್. - 5) ವರದಿಯನ್ನು ಕೇಂದ್ರ ಆರೋಗ್ಯ ಸಚಿವಾಲಯ ನಿನ್ನೆ ಬಿಡುಗಡೆ ಮಾಡಿದೆ. ಇದು ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ವಿಷಯಗಳ ಸಮಗ್ರ ವರದಿಯಾಗಿದೆ.

ಡಿಸೆಂಬರ್ 2020ರಂದು ಬಿಡುಗಡೆಯಾದ ಮೊದಲ ಕಂತಿನ ವರದಿಯಲ್ಲಿ 11 ರಾಜ್ಯಗಳು ಹಾಗೂ ಮೂರು ಕೇಂದ್ರಾಡಳಿತ ಪ್ರದೇಶಗಳನ್ನು ಸೇರ್ಪಡೆ ಮಾಡಿರಲಿಲ್ಲ. ಈಗ ಸಮಗ್ರವಾಗಿ ಎಲ್ಲಾ ಮಾಹಿತಿ ಬಿಡುಗಡೆ ಮಾಡಲಾಗಿದೆ.

ಟಿ.ಎಫ್.ಆರ್. ಮಟ್ಟ ಈಗ ಸರಾಸರಿಯ ಹಂತಕ್ಕೆ ಬಂದಿದೆ. ಈ ದಾಖಲೆಗಳನ್ನು ಪರಿಗಣಿಸಿದಾಗ, ಜನಸಂಖ್ಯಾ ಸ್ಫೋಟ ಉಳಿದಿಲ್ಲ ಎಂಬುದು ಗೊತ್ತಾಗುತ್ತದೆ. ಜನಸಂಖ್ಯೆ ನಿಯಂತ್ರಣಕ್ಕಾಗಿ ಬಲವಂತದ ಕ್ರಮಗಳನ್ನು ತೆಗೆದುಕೊಳ್ಳುವುದರಿಂದ ದೂರ ಇರಬೇಕು ಎಂದು ಪಿ.ಎಫ್.ಐ. ಕಾರ್ಯಕಾರಿ ನಿರ್ದೇಶಕಿ ಪೂನಮ್ ಮುತ್ರೆಜ ಹೇಳಿದ್ದಾರೆ.

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

WANTED
Sales Executives (3 yrs)
Manager (5 yrs) (car)
Telecalling (F) (car)
Java-API Developer
SFDC Developer
98444 92888

AVOID MOSQUITOES
Mosquito Net for Doors and windowsh, MDF Design Boards available.
SRI GOWRI ENTERPRISES
7C2, 4th Cross, Karur Industrial Area, Near D.C Office, P.B Road, Davangere.
72049 94628

WANTED
Marketing Persons (own vehicle)
Qualification: Degree,
Experience: 3-4 Years,
Salary: 10-15+ Incentive.
RSR Enterprises.
81472 75735, 77951 44285

ಶ್ರೀ ಗುರು ಮರುಳಸಿದ್ದೇಶ್ವರ ಸ್ವಾಮಿ ಸೇವಾ ಸಂಸ್ಥೆ (ರಿ.)
ಹಿಂದೂ ವಧು-ವರರ ಮಾಹಿತಿ ಕೇಂದ್ರ
www.hindusmatrimony.com
ನಮ್ಮಲ್ಲಿ ಎಲ್ಲಾ ತರಹದ ಹಿಂದೂ ವಧು-ವರರಿಗಾಗಿ ಸಂಪರ್ಕಿಸಿ.
ವಿಳಾಸ : ಬಾಣಾಪುರಮಠ ಹಾಸ್ಪಿಟಲ್ ಎದುರು, 8ನೇ ಮೇನ್, ಪಿ.ಜೆ. ಬಡಾವಣೆ, ದಾವಣಗೆರೆ-2.
94481-59303, 94834 63783

ಬೇಕಾಗಿದ್ದಾರೆ
ಲಾಡ್ಜ್‌ನಲ್ಲಿ ಹಗಲು ಮತ್ತು ರಾತ್ರಿ ಪ್ರತ್ಯೇಕ ಪಾಳೆ

ಹಂದಿಗಳ ಸಾವಿಗೆ ಕಾರಣ ಕ್ಲಾಸಿಕಲ್ ಸ್ವೈನ್ ಫೀವರ್ !

ಹೊನ್ನಾಳಿ, ನ.25- ಅನೇಕ ದಿನಗಳಿಂದ ಪ್ರತಿದಿನ ಹೊನ್ನಾಳಿ ಪಟ್ಟಣದಲ್ಲಿ 15 ರಿಂದ 20 ಹಂದಿಗಳ ಸಾವು ಸಂಭವಿಸುತ್ತಿರುವುದಕ್ಕೆ ಕ್ಲಾಸಿಕಲ್ ಸ್ವೈನ್ ಫೀವರ್ ಎಂಬ ರೋಗ ಕಾರಣ ಎಂಬುದಾಗಿ ಪಟ್ಟಣ ಪಂಚಾಯಿತಿ ಅಧ್ಯಕ್ಷ ಬಾಬು ಹೋಬಳದಾರ್ ತಿಳಿಸಿದರು.

ಗುರುವಾರ ಈ ವಿಷಯವಾಗಿ ಸಭೆ ನಡೆಸಿದ ಅವರು, ಒಂದು ತಿಂಗಳ ಅಂತರದಲ್ಲಿ ಪ್ರತಿದಿನ ಹಂದಿಗಳು ಸಾಯುವುದಕ್ಕೆ ಯಾರೋ ವಿಷವನ್ನು ಇಟ್ಟಿರಬಹುದೆಂದು ಸುಮ್ಮನಿದ್ದೆವು.

ಪಟ್ಟಣದ ಸಾರ್ವಜನಿಕರು ಹಂದಿಗಳ ಸಾವಿನ ಬಗ್ಗೆಯೇ ಹೆಚ್ಚು ದೂರವಾಣಿ ಮಾಡುವುದಲ್ಲದೇ ತಮ್ಮ ಸಮಸ್ಯೆಯನ್ನು ಹಂಚಿಕೊಳ್ಳುತ್ತಿದ್ದರು. ಒಂದು ದಿನ ಸುಮಾರು 40 ಕ್ಕೂ ಹೆಚ್ಚು ಹಂದಿಗಳನ್ನು ಟ್ರ್ಯಾಕ್ಟರ್‌ನಲ್ಲಿ ಹಾಕಿ ಕೊಂಡು ಪಂಚಾಯಿತಿ ಸಿಬ್ಬಂದಿಗಳು ಹೋಗುತ್ತಿರುವುದನ್ನು ಗಮನಿಸಿ, ಇಷ್ಟೊಂದು ಹಂದಿಗಳ ಸಾವಿಗೆ ಏನೋ ಕಾರಣ ಇರಬಹುದೆಂಬ ಶಂಕೆ ಮೂಡಿ ಗಮನ ಹರಿಸಲಾಯಿತು.

ಹೊನ್ನಾಳಿ

ಪಶುವೈದ್ಯಾಧಿಕಾರಿಗಳ ಹಾಗೂ ಆರೋಗ್ಯ ನಿರೀಕ್ಷಕರ ಮೂಲಕ ದಾವಣಗೆರೆಗೆ ಸತ್ತ ಹಂದಿಗಳ ವರದಿ ಕಳಿಸಿದಾಗ ಯಾವುದೇ ರೋಗವಿಲ್ಲವೆಂದು ವರದಿ ಬಂದಿತು. ಹಂದಿಗಳ ಸಾವಿನ ಪ್ರಮಾಣ ಹೆಚ್ಚಿದ ಕಾರಣ ಮತ್ತೊಷ್ಟು ಅನುಮಾನ ಬಲಗೊಂಡು, ಹಂದಿ ಸತ್ತ ಎರಡು ತಾಸುಗಳಲ್ಲಿ ಅದರ ಶಾಂಪಲ್ ಪಡೆದು, ಬೆಂಗಳೂರು ಲ್ಯಾಬ್‌ಗೆ ಕಳಿಸಿದಾಗ ಕ್ಲಾಸಿಕಲ್ ಸ್ವೈನ್ ಫೀವರ್ ರೋಗವಿರುವ ಬಗ್ಗೆ ಅಲ್ಲಿನ ವೈದ್ಯರು ದೃಢಪಡಿಸಿದರು.

ಬುಧವಾರ ಹಂದಿ ಮಾಲೀಕರು ಹಾಗೂ ಜಿಲ್ಲೆಯ ಅಧಿಕಾರಿಗಳೊಂದಿಗೆ ಸಭೆ ನಡೆಸಿದ್ದು, ಸಾರ್ವಜನಿಕರಿಗೂ ಈ ಕಾಯಿಲೆ ಬರಬಹುದೆಂಬ ಶಂಕೆ ಇದ್ದು, ಇದರ ಬಗ್ಗೆ ಜಾಗೃತಿ ಮೂಡಿಸುವ ಮೂಲಕ ಜನತೆಗೆ ಎಚ್ಚರಿಕೆ ನೀಡಲು ತೀರ್ಮಾನ ಕೈಗೊಳ್ಳಲಾಗಿದೆ.

ಮಾಸಡಿಯ ವರಾಹ ಶಾಲೆಯಲ್ಲಿ ಹಂದಿಗಳನ್ನು ಇರಿಸಿ ಲಸಿಕೆ ಹಾಕುವ ಪ್ರಕ್ರಿಯೆಗೆ ಮುಂದಾಗಲಿದ್ದು, ಸಾರ್ವಜನಿಕರು ಹಾಗೂ ಹಂದಿ ಮಾಲೀಕರ ವೈದ್ಯಾಧಿಕಾರಿಗಳ ಸಹಕಾರ ಅತಿ ಮುಖ್ಯವಾಗಿದೆ ಎಂದರು.

> “ ಹಂದಿಗಳನ್ನು ಹಿಡಿದು ಲಸಿಕೆ ಹಾಕಿಯೇ ಮಾಸಡಿ ವರಾಹ ಶಾಲೆಯಲ್ಲಿ ಕಲೆಹಾಕಿ, ರೋಗ ಹತೋಟಿಗೆ ತರಲಾಗುವುದು.
>
> **- ಬಾಬು ಹೋಬಳದಾರ್**, ಪ.ಪಂ. ಅಧ್ಯಕ್ಷ

ಪ್ರತಿ ದಿನ ಹಿಡಿದ ಹಂದಿಗಳಿಗೆ ಚುಚ್ಚು ಮದ್ದು ಹಾಕಿಯೇ ವರಾಹ ಶಾಲೆಗೆ ಬಿಡಲಾಗುವುದು. ಲಸಿಕೆ ಹಾಕಿ 20 ದಿನ ಅಲ್ಲಿಯೇ ಹಂದಿಗಳನ್ನು ಇರಿಸಿ ರೋಗ ಹತೋಟಿ ನಂತರ ಹಂದಿಗಳನ್ನು ಬೇರೆಡೆ ಸಾಗಿಸುವಂತೆ ಸೂಚಿಸಲಾಗಿದೆ ಎಂದರು.

ಈ ಸಂದರ್ಭದಲ್ಲಿ ಪಂಚಾಯಿತಿ ಉಪಾಧ್ಯಕ್ಷರಾದ ರಂಜಿತಾ ಚನ್ನಪ್ಪ, ಪಂಚಾಯಿತಿ ಸದಸ್ಯ ಬಾವಿಮನಿ ರಾಜಣ್ಣ ಸೇರಿದಂತೆ ಶಿವು ಉಡೇದ್, ಮಂಜು ಇಂಚರ ಕೋಳಿ ಸತೀಶ್ ಇದ್ದರು.

ಚಿತ್ತಾರಗೇರಿ ಪ್ರದೇಶವನ್ನು ಕೊಳಚೆ ಪ್ರದೇಶ ಎಂದು ಘೋಷಿಸಲು ಮನವಿ

ಹರಪನಹಳ್ಳಿ, ನ.25- ಪಟ್ಟಣದ 11ನೇ ವಾರ್ಡ್ ಚಿತ್ತಾರಗೇರಿ ಪ್ರದೇಶವನ್ನು ಕೊಳಚೆ ಪ್ರದೇಶವೆಂದು ಘೋಷಿಸುವಲ್ಲಿ ತಾರತಮ್ಯ ಎಸಗಲಾಗುತ್ತದೆ. ಇಲ್ಲಿನ ಪುರಸಭಾ ಅಧಿಕಾರಿಗಳು ಸೂಕ್ತ ನಿರ್ದೇಶನ ನೀಡಬೇಕು ಎಂದು ಪುರಸಭಾ ಸದಸ್ಯ ಜಾಕೀರ್ ಸರ್ಖಾವಸ್ ಅವರು ಜಿಲ್ಲಾಧಿಕಾರಿ ಅನಿರುದ್ದ ಶ್ರವಣ್ ಅವರಿಗೆ ಮನವಿ ಸಲ್ಲಿಸಿದರು.

ಇಲ್ಲಿನ ಜನರಿಗೆ ಸರ್ಕಾರಿ ಸೌಲಭ್ಯಗಳನ್ನು ಕಲ್ಪಿಸಿಕೊಡುವ ದೃಷ್ಟಿಯಿಂದ ವಿ.ಪ ಸದಸ್ಯ ಕೆ.ಸಿ.ಕೊಂಡಯ್ಯನವರ ಶಿಫಾರಸ್ಸಿನ ಮೇರೆಗೆ ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ ಹಾಗೂ ಪುರಸಭಾ ಮುಖ್ಯಾಧಿಕಾರಿಯವರಿಗೆ ಪತ್ರ ಬರೆದು ಚಿತ್ತಾರಗೇರಿ ಪ್ರದೇಶವನ್ನು ಕೊಳಗೇರಿ ಎಂದು ಘೋಷಿಸಲು ಅಗತ್ಯ ದಾಖಲೆಗಳನ್ನು ಸಲ್ಲಿಸಲು ಕೋರಲಾಗಿತ್ತಾದರೂ ಈವರೆಗೂ ಯಾವುದೇ ಕ್ರಮ ವಾಗಿಲ್ಲ.

ಆದ್ದರಿಂದ ಚಿತ್ತಾರಗೇರಿ ಪ್ರದೇಶವನ್ನು ಕೊಳಚೆ ಪ್ರದೇಶ ವೆಂದು ಘೋಷಿಸಲು ಅಗತ್ಯ ಕ್ರಮ ಕೈಗೊಳ್ಳಬೇಕೆಂದು ಪುರಸಭಾ ಅಧಿಕಾರಿಗಳಿಗೆ ನಿರ್ದೇಶನ ನೀಡಬೇಕು ಎಂದು ಅವರು ಮನವಿ ಪತ್ರದಲ್ಲಿ ಕೋರಿದ್ದಾರೆ.

ಕೊರೊನಾದ ರೂಪಾಂತರಿ ಪತ್ತೆ

(1ನೇ ಪುಟದಿಂದ) ಡಿಸೆಂಬರ್ ಇಲ್ಲವೇ ಜನವರಿಯಲ್ಲಿ ಬರಬಹುದು ಎಂಬ ನಿರೀಕ್ಷೆ ಇತ್ತು. ಆದರೆ, ಹೊಸ ರೂಪಾಂತರಿಯಿಂದ ಸೋಂಕು ಹೆಚ್ಚಾಗಿದೆ ಎಂದು ತಿಳಿಸಿದ್ದಾರೆ.

ದೇಶದಲ್ಲಿ ಕೊರೊನಾ ಸೋಂಕಿತರು ಕಂಡು ಬರುವ ಪ್ರಮಾಣ ವೇಗವಾಗಿ ಹೆಚ್ಚಾಗುತ್ತಿದೆ. ಅತಿ ಹೆಚ್ಚಿನ ಸಂಖ್ಯೆ ಇರುವ ಗೌಟೆಗ್‌ನಲ್ಲಿ ಸೋಂಕು ಗಣನೀಯವಾಗಿ ಏರುತ್ತಿದೆ. ದಕ್ಷಿಣ ಆಫ್ರಿಕಾದಲ್ಲಿ ಈ ಹಿಂದೆಯೂ ಕೊರೊನಾ ರೂಪಾಂತರಿಗಳು ಕಂಡು ಬಂದಿದ್ದವು. ಆದರೆ, ಇದುವರೆಗೂ ಡೆಲ್ಟಾ ರೂಪಾಂತರಿಯೇ ಅತಿ ಹೆಚ್ಚಿನ ಪ್ರಮಾಣದಲ್ಲಿತ್ತು. ಮೊದಲ ಬಾರಿಗೆ ಡೆಲ್ಟಾಗಿಂತ ಬೇರೆ ರೂಪಾಂತರಿ ವೇಗವಾಗಿ ಹರಡುತ್ತಿದೆ.

ಹೊಸ ರೂಪಾಂತರಿಯ ಸೋಂಕು ಪಕ್ಕದ ಬೋಟ್ಸ್‌ವಾನಾ ಹಾಗೂ ದೂರದ ಹಾಂಕಾಂಗ್‌ನಲ್ಲೂ ಪತ್ತೆಯಾಗಿದೆ.

ದಕ್ಷಿಣ ಆಫ್ರಿಕಾ ಮತ್ತಿತರ ಕಡೆಗಳಲ್ಲಿ ಕೊರೊನಾ ರೂಪಾಂತರಿ ಕಂಡು ಬಂದಿರುವ ಹಿನ್ನೆಲೆಯಲ್ಲಿ, ಭಾರತದಲ್ಲೂ ಕಟ್ಟೆಚ್ಚರ ವಹಿಸಲು ಕೇಂದ್ರ ಸರ್ಕಾರ ಸೂಚನೆ ನೀಡಿದೆ. ಹೊಸ ರೂಪಾಂತರಿ ಅಸಾಮಾನ್ಯ ವಿನ್ಯಾಸ ಹೊಂದಿದೆ ಎಂದು ತಿಳಿಸಲಾಗಿದೆ.

ಈಗಾಗಲೇ ರೋಗ ನಿರೋಧಕ ಶಕ್ತಿ ಹೊಂದಿದ್ದರೂ ಸಹ ಬಿ.1.1.529 ಸೋಂಕು ಬರಬಹುದು ಎಂದು ವಿಜ್ಞಾನಿಗಳು ಹೇಳಿದ್ದಾರೆ.

ರಾಣೇಬೆನ್ನೂರು: ಬಿಎಜೆಎಸ್‌ಎಸ್ ವಿದ್ಯಾರ್ಥಿ ಸಂಘದ ಉದ್ಘಾಟನೆ

ರಾಣೇಬೆನ್ನೂರು, ನ.25 - ಇಲ್ಲಿನ ಹಲಗೇರಿ ರಸ್ತೆಯ ಬಿಎಜೆ ಎಸ್ ಎಸ್ ಮಹಾವಿದ್ಯಾಲಯದ ಬಿಎಡ್ ವಿದ್ಯಾರ್ಥಿ ಸಂಘವನ್ನು ಉಪನ್ಯಾಸಕ ಶಿವಕುಮಾರ ಹೊನ್ನಾಳಿ ಉದ್ಘಾಟಿಸಿದರು. ಸಂಸ್ಥೆಯ ಅಧ್ಯಕ್ಷ ರುದ್ರಪ್ಪ ಲಮಾಣಿ, ಆಡಳಿತಾಧಿಕಾರಿ ಆರ್.ಎಂ. ಕುಬೇರಪ್ಪ, ಪ್ರಾಂಶುಪಾಲ ಎಂ. ಎಂ.ಮೃತ್ಯುಂಜಯ, ಉಪನ್ಯಾಸಕರಾದ ಎಸ್. ಎ. ಭಿಕ್ಷಾವರ್ತಿಮಠ, ಜೆ.ಎಂ. ಖಾಜಿ, ಎನ್.ಎಮ್. ಗೊರವರ, ಕುಮಾರ ಗೋವಿಂದ, ಜ್ಯೋತಿ ಬೂದನೂರ ಮತ್ತಿತರರಿದ್ದರು.

ಹಾನಿಗೀಡಾದ ಪ್ರೊ. ಕೃಷ್ಣಪ್ಪ ಮನೆ ದುರಸ್ತಿ, ಸ್ಮಾರಕ ಭವನ ನಿರ್ಮಾಣ : ಡಿಸಿ ಬೀಳಗಿ

ಹರಿಹರ, ನ.25- ನಗರದಲ್ಲಿ ಮೊನ್ನೆ ಸುರಿದ ಮಳೆಯಿಂದಾಗಿ ಎ.ಕೆ. ಕಾಲೋನಿಯಲ್ಲಿರುವ ದಲಿತ ಹೋರಾಟಗಾರ ಪ್ರೊ. ಬಿ. ಕೃಷ್ಣಪ್ಪ ಅವರ ಮನೆ ಸಂಪೂರ್ಣ ವಾಗಿ ಹಾನಿಯಾಗಿದ್ದರಿಂದ, ಸ್ಥಳಕ್ಕೆ ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಭೇಟಿ ಮಾಡಿ ಪರಿಶೀಲಿಸಿದರು.

ಈ ವೇಳೆ ಮಾತನಾಡಿದ ಅವರು, ಮನೆಯನ್ನು ದುರಸ್ತಿ ಮಾಡಲು ಮತ್ತು ಈ ಸ್ಥಳದಲ್ಲಿ ಪ್ರೊಫೆಸರ್ ಬಿ. ಕೃಷ್ಣಪ್ಪ ಅವರ ಸ್ಮಾರಕ ಭವನ ನಿರ್ಮಿಸಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗುವುದು. ಇದಕ್ಕಾಗಿ ಸ್ಥಳದ ದಾಖಲೆಗಳನ್ನು ತಮ್ಮ ಬಳಿ ನೀಡುವಂತೆ ತಿಳಿಸಿದರು.

ಈ ವೇಳೆ ಪ್ರೊ. ಬಿ. ಕೃಷ್ಣಪ್ಪ ಕುಟುಂಬದ ಸದಸ್ಯ ಬಸವರಾಜ್ ಹಾಗೂ ಸದಾನಂದ ಮಾತನಾಡಿ, ಪ್ರೊಫೆಸರ್ ಬಿ. ಕೃಷ್ಣಪ್ಪ ನವರ ಸ್ಮಾರಕ ನಿರ್ಮಾಣ ಮಾಡುವುದಕ್ಕೆ ಮುಂದಾಗಿರುವುದು ಸಂತಸ ತರಿಸಿದೆ. ಆದರೆ, ನಮ್ಮ ಕುಟುಂಬದ ಲಕ್ಕಮ್ಮ ಮತ್ತು ನಾವು ಹಲವಾರು ವರ್ಷಗಳಿಂದ ಇದೇ ಮನೆಯಲ್ಲಿದ್ದೇವೆ. ನಮಗೆ ಬೇರೆ ಯಾವುದೇ ಮನೆ, ಆಸ್ತಿ ಇಲ್ಲದ ಕಾರಣ, ನಮ್ಮ ಕುಟುಂಬದ ಸದಸ್ಯರು ವಾಸ ಮಾಡುವುದಕ್ಕೆ ಅನುಕೂಲ ಮಾಡಿ ಸ್ಮಾರಕ ನಿರ್ಮಾಣ ಮಾಡಬೇಕು ಎಂದು ಮನವಿ ಮಾಡಿಕೊಂಡರು.

ದಲಿತ ಸಮಾಜದ ಮುಖಂಡ ಹೆಚ್. ನಿಜಗುಣ, ಪಿ.ಜೆ. ಮಹಾಂತೇಶ್ ಹಾಗೂ ಸಂತೋಷ್ ನೋಟದರ್, ಮಲ್ಲೇಶ್ ಮಾತ ನಾಡಿ, ಕೃಷ್ಣಪ್ಪ ಅವರ ಹಳೆಯ ಕಾಲದ ಮನೆಯನ್ನು ಸ್ಮಾರಕ ಮಾಡುವಂತೆ ಹಿಂದೆಯೂ ಮನವಿ ಸಲ್ಲಿಸ ಲಾಗಿತ್ತು. ಈಗ ಕೃಷ್ಣಪ್ಪ ಅವರ ಮನೆ ಸಂಪೂರ್ಣವಾಗಿ ಹಾನಿಯಾಗಿದ್ದರಿಂದ ಅವರ ಕುಟುಂಬದ ಸದಸ್ಯರು ಬೀದಿಯಲ್ಲಿ ವಾಸ ಮಾಡುವಂತಹ ಪರಿಸ್ಥಿತಿಯಾಗಿದೆ. ಕೂಡಲೇ ಮನೆ ಹಾಗೂ ಸ್ಮಾರಕ ನಿರ್ಮಿಸಬೇಕು ಎಂದು ಒತ್ತಾಯಿಸಿದರು.

ಈ ಸಂದರ್ಭದಲ್ಲಿ ತಹಶೀಲ್ದಾರ್ ಕೆ.ಬಿ. ರಾಮಚಂದ್ರಪ್ಪ, ಪ್ರೊಬೇಷನರಿ ಡಿವೈಎಸ್ಪಿ ಭೂತೆಗೌಡ್ರು, ನಗರಸಭೆ ಸದಸ್ಯ ರಜನಿಕಾಂತ್, ಹನುಮಂತಪ್ಪ, ನಾಮಿನಿ ಸದಸ್ಯ ಸುರೇಶ್ ತೆರದಾಳ, ಬಸವರಾಜ್, ಸದಾನಂದ, ಜಿ.ಪಂ. ಮಾಜಿ ಸದಸ್ಯ ವಾಗೀಶ ಸ್ವಾಮಿ, ಚಂದ್ರಶೇಖರ್ ಉಪಸ್ಥಿತರಿದ್ದರು.

ವೈದ್ಯ ವಿದ್ಯಾರ್ಥಿಗಳಿಗೆ ಕೊರೊನಾ ಸೋಂಕು

(1ನೇ ಪುಟದಿಂದ) ತಡೆಗಟ್ಟಲು ಕೈಗೊಂಡಿರುವ ಕ್ರಮ ಗಳನ್ನು ಪರಿಶೀಲಿಸಲು ನಾನು ಸಹ ಕಾಲೇಜಿಗೆ ಭೇಟಿ ನೀಡುವುದಾಗಿ ತಿಳಿಸಿರುವ ಪಾಟೀಲ್, ಕಾಲೇ ಜಿನ ಎಲ್ಲಾ ವಿದ್ಯಾರ್ಥಿಗಳಿಗೆ ಲಸಿಕೆ ನೀಡ ಲಾಗಿದೆ ಎಂದು ಕಾಲೇಜು ಆಡಳಿತ ಮಂಡಳಿ ತಿಳಿಸಿರುವುದಾಗಿ ಹೇಳಿದ್ದಾರೆ.

ಮನೆ ಕೆಲಸಕ್ಕೆ ಮಹಿಳೆ ಬೇಕಾಗಿದ್ದಾರೆ

ವಾಸಕ್ಕೆ ಮನೆ ಕೊಡಲಾಗುವುದು.
ಚಿಕ್ಕ ಕುಟುಂಬವಿರಬೇಕು ಮತ್ತು ಸಸ್ಯಹಾರಿಯಾಗಿರಬೇಕು.
ಸೂಕ್ತ ಪರಿಚಯದೊಂದಿಗೆ ಸಂಪರ್ಕಿಸಿ :

SHANTALA
CHAMARAJ PET, DAVANAGERE.
Phone : 96861 95326, 96861 95327



ಮಾನ್ಯ 2ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ, ದಾವಣಗೆರೆ.

ಪಿ&ಎಸ್.ಸಿ. 16/2021

ಅರ್ಜಿದಾರರು : **1) ಶ್ರೀಮತಿ ರಾಜೇಶ್ವರಿ ಎ.ಜೆ.** ಕೋಂ ಲೇಟ್ ಎ.ಸಿ. ಜಯಣ್ಣ, ವಯಸ್ಸು 74 ವರ್ಷ. **2) ಶ್ರೀಮತಿ ಲತಾ ಎ.ಜೆ.** ಬಿನ್ ಲೇಟ್ ಎ.ಸಿ. ಜಯಣ್ಣ, ವಯಸ್ಸು 55 ವರ್ಷ. **3) ಶ್ರೀಮತಿ ಸ್ಮಿತಾ ಎ.ಜೆ.** ಕೋಂ ಲೇಟ್ ಎ.ಸಿ. ಜಯಣ್ಣ, ವಯಸ್ಸು 48 ವರ್ಷ. **4) ಶ್ರೀಮತಿ ನೀತಾ ಎ.ಜೆ.** ಬಿನ್ ಲೇಟ್ ಎ.ಸಿ. ಜಯಣ್ಣ, ವಯಸ್ಸು 44 ವರ್ಷ. **5) ಶ್ರೀಮತಿ ಸಪ್ನ ಸಂದೀಪ್** ಕೋಂ ಲೇಟ್ ಎ.ಜೆ. ಸಂದೀಪ್ ವಯಸ್ಸು 39 ವರ್ಷ. **6) ಕು. ಎಸ್.ಎಸ್. ಶಾಂಭವಿ** ಬಿನ್ ಲೇಟ್ ಎ.ಜೆ. ಸಂದೀಪ್. **7) ಎಸ್.ಎಸ್. ಸಮಾಹಿತ್** ಬಿನ್ ಲೇಟ್ ಎ.ಜೆ. ಸಂದೀಪ್, ವಯಸ್ಸು 19 ವರ್ಷ. 1 ರಿಂದ 7ರ ಅರ್ಜಿದಾರರ ವಿಳಾಸ : ಡೋರ್ ನಂ. 400, 8ನೇ ಮೇನ್, 8ನೇ ಕ್ರಾಸ್, ಪಿ.ಜೆ. ಬಡಾವಣೆ, ದಾವಣಗೆರೆ. ವಿರುದ್ಧ

ಎದುರುದಾರರು : **ಯಾರೂ ಇಲ್ಲ**

ಸಾರ್ವಜನಿಕ ಪ್ರಕಟಣಾ ನೋಟೀಸ್

ದಾವಣಗೆರೆ ನಗರದ ಪಿ.ಜೆ. ಬಡಾವಣೆ ವಾಸಿಗಳಾದ ಶ್ರೀಯುತ ಎ.ಸಿ. ಜಯಣ್ಣ ಹಾಗೂ ಅವರ ಮಗನಾದ ಎ.ಜೆ. ಸಂದೀಪ್ ಇವರುಗಳು ಈ ಹಿಂದೆ ಮೃತಪಟ್ಟಿರುತ್ತಾರೆ. ಮೇಲ್ಕಂಡ ಅರ್ಜಿದಾರರು, ದಿವಂಗತ ಎ.ಸಿ. ಜಯಣ್ಣ ಹಾಗೂ ಎ.ಜೆ. ಸಂದೀಪ್ ಇವರ ಕಾನೂನು ಬದ್ಧ ವಾರಸುದಾರರಾಗಿದ್ದು, ಷೆಡ್ಯೂಲ್ ಸ್ವತ್ತಿನ ಬಗ್ಗೆ ವಾರಸುದಾರರ ಪ್ರಮಾಣ ಪತ್ರವನ್ನು (ಸಕ್ಷೇಷನ್ ಸರ್ಟಿಫಿಕೇಟ್) ಮಂಜೂರು ಮಾಡಲು ಕೋರಿ ಮಾನ್ಯ ನ್ಯಾಯಾಲಯದಲ್ಲಿ ಭಾರತೀಯ ವಾರಸುದಾರರ ಕಾಯ್ದೆ ಅನ್ವಯ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಮಾನ್ಯ ನ್ಯಾಯಾಲಯವು ಅರ್ಜಿಯ ವಿಚಾರಣೆಗೆ ದಿನಾಂಕ 23.12.2021ರಂದು ಬೆಳಿಗ್ಗೆ 11.00 ಗಂಟೆಗೆ ನಿಗದಿಪಡಿಸಿರುತ್ತದೆ.

ಮೇಲ್ಕಂಡ ಅರ್ಜಿದಾರರಿಗೆ ಷೆಡ್ಯೂಲ್ ಸ್ವತ್ತಿನ ಸಕ್ಷೇಷನ್ ಸರ್ಟಿಫಿಕೇಟ್ ಮಂಜೂರು ಮಾಡುವ ಬಗ್ಗೆ ಯಾರಿಗಾದರೂ ಯಾವುದೇ ರೀತಿ ತಂಟೆ, ತಕರಾರು ಆಕ್ಷೇಪಣೆ ಇದ್ದಲ್ಲಿ ಮೇಲ್ಕಂಡ ದಿನಾಂಕ ಮತ್ತು ಸಮಯದಂದು ಮಾನ್ಯ ನ್ಯಾಯಾಲಯದ ಮುಂದೆ ತಾವಾಗಲೀ ಅಥವಾ ತಮ್ಮ ಪರ ವಕೀಲರ ಮೂಲಕ ಹಾಜರಾಗಿ ತ

ಜನ್ಮದಿನದ ಶುಭಾಶಯಗಳು
ರಾಜ್ಯದ ಬಿಜೆಪಿ ಹಿರಿಯ ನಾಯಕರೂ,
ಹಿರಿಯ ಮುತ್ಸದ್ಧಿ ರಾಜಕಾರಣಿಗಳೂ, ದಾವಣಗೆರೆ
ಜಿಲ್ಲಾ ಉಸ್ತುವಾರಿ ಮಾಜಿ ಸಚಿವರೂ, ರೈತ ನಾಯಕರೂ,
ನಮ್ಮೆಲ್ಲರ ಮಾರ್ಗದರ್ಶಕರೂ ಹಾಗೂ ದಾವಣಗೆರೆ ಉತ್ತರ
ವಿಧಾನಸಭಾ ಕ್ಷೇತ್ರದ ಜನಪ್ರಿಯ ಶಾಸಕರೂ ಆದ
ಸನ್ಮಾನ್ಯ ಶ್ರೀ ಎಸ್.ಎ. ರವೀಂದ್ರನಾಥ್
ಅವರಿಗೆ 76ನೇ ಜನ್ಮದಿನದ ಶುಭಾಶಯಗಳು.
ಶ್ರೀನಿವಾಸ ದಾಸಕರಿಯಪ್ಪ
ಜಿಲ್ಲಾ ಉಪಾಧ್ಯಕ್ಷರು,
ಭಾರತೀಯ ಜನತಾ ಪಾರ್ಟಿ, ದಾವಣಗೆರೆ

ಹುಟ್ಟುಹಬ್ಬದ ಶುಭಾಶಯಗಳು
76 YEARS
ಇಂದು ಹುಟ್ಟುಹಬ್ಬ ಆಚರಿಸಿಕೊಳ್ಳುತ್ತಿರುವ ದಾವಣಗೆರೆ
ಜಿಲ್ಲಾ ಮಾಜಿ ಉಸ್ತುವಾರಿ ಸಚಿವರೂ, ಸರಳ ಸಜ್ಜನಿಕೆಯ
ಸಹೃದಯಿ ರಾಜಕಾರಣಿಗಳು, ಅಭಿವೃದ್ಧಿ ಹರಿಕಾರರೂ,
ಹೋರಾಟಗಾರರೂ ಹಾಗೂ ದಾವಣಗೆರೆ ಉತ್ತರ
ವಿಧಾನಸಭಾ ಕ್ಷೇತ್ರದ ಜನಪ್ರಿಯ ಶಾಸಕರೂ ಆದ
ಸನ್ಮಾನ್ಯ ಶ್ರೀ ಎಸ್.ಎ. ರವೀಂದ್ರನಾಥ್
ಅವರಿಗೆ 76ನೇ ಜನ್ಮದಿನದ ಹಾರ್ದಿಕ ಶುಭಾಶಯಗಳು.
ಎಲ್.ಡಿ. ಗೋಣೆಪ್ಪ
ಅಧ್ಯಕ್ಷರು,
ಸಾರ್ವಜನಿಕ ಆರೋಗ್ಯ, ಶಿಕ್ಷಣ ಮತ್ತು ಸಾಮಾಜಿಕ ನ್ಯಾಯ ಸ್ಥಾಯಿ
ಸಮಿತಿ, ಮಹಾನಗರ ಪಾಲಿಕೆ, ದಾವಣಗೆರೆ.
ಎಲ್.ಜಿ. ಬಸವರಾಜ್
ನಗರ ಉಪಾಧ್ಯಕ್ಷರು,
ಬಿಜೆಪಿ, ಎಸ್.ಸಿ. ಮೋರ್ಚಾ, ದಾವಣಗೆರೆ

ಹುಟ್ಟುಹಬ್ಬದ ಹಾರ್ದಿಕ ಶುಭಾಶಯಗಳು
ರಾಜ್ಯದ ಬಿಜೆಪಿ ಹಿರಿಯ ನಾಯಕರು, ದಾವಣಗೆರೆ ಜಿಲ್ಲಾ ಮಾಜಿ ಉಸ್ತುವಾರಿ ಸಚಿವರು,
ದಾವಣಗೆರೆ ಉತ್ತರ ವಿಧಾನ ಸಭಾ ಕ್ಷೇತ್ರದ ಶಾಸಕರೂ ಆದ
ಸನ್ಮಾನ್ಯ ಶ್ರೀ ಎಸ್. ಎ. ರವೀಂದ್ರನಾಥ್
ಅವರಿಗೆ 75ನೇ ಜನ್ಮದಿನದ 'ಅಮೃತ ಮಹೋತ್ಸವ' ಶುಭಾಶಯಗಳು
ಶ್ರೀ ಜೆ.ಎಸ್. ವೇಣುಗೋಪಾಲ ರೆಡ್ಡಿ
ಅಧ್ಯಕ್ಷರು
ಶ್ರೀ ಬಿ. ಶೇಖರಪ್ಪ
ಉಪಾಧ್ಯಕ್ಷರು
ಶ್ರೀ ಕೆ.ಹೆಚ್. ಷಣ್ಮುಖಪ್ಪ
ನಿರ್ದೇಶಕರು
ಶ್ರೀ ಜಗದೀಶಪ್ಪ ಬಣಕಾರ್
ನಿರ್ದೇಶಕರು, ಅಪೆಕ್ಸ್ ಬ್ಯಾಂಕ್
ಶ್ರೀ ಬಿ. ಹಾಲೇಶಪ್ಪ
ನಿರ್ದೇಶಕರು
ಶ್ರೀ ಜೆ.ಎನ್. ಸ್ವಾಮಿ
ನಿರ್ದೇಶಕರು
ಶ್ರೀ ಟಿ.ಜಿ. ಜೀವನ್ ಪ್ರಕಾಶ್
ನಾಮ ನಿರ್ದೇಶನ ನಿರ್ದೇಶಕರು
ಶ್ರೀ ಹೆಚ್. ಕೆ. ಶಾಲಾಕ್ಷಪ್ಪ
ಅಪೆಕ್ಸ್ ಬ್ಯಾಂಕ್ ಪ್ರತಿನಿಧಿ
ಶ್ರೀ ಜಿ. ಮುರುಗೇಂದ್ರಪ್ಪ
ವೃತ್ತಿಪರ ನಿರ್ದೇಶಕರು
ಶ್ರೀ ದಿವಾಕರ್ ಹೆಚ್. ವಕೀಲರು
ನಿರ್ದೇಶಕರು
ಶ್ರೀ ಬಿ. ಜಯಪ್ರಕಾಶ್
ಸಹಕಾರ ಸಂಘಗಳ ಉಪನಿಬಂಧಕರು
ಶ್ರೀ ತಾವರ್ಯಾನಾಯ್ಕ್
ಮುಖ್ಯ ಕಾರ್ಯನಿರ್ವಹಣಾಧಿಕಾರಿ
ಶ್ರೀ ವಿ. ರವೀಂದ್ರ
ನಬಾರ್ಡ್ ಅಧಿಕಾರಿಗಳು
ದಾವಣಗೆರೆ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ನಿ.,
311, ಶ್ರೀ ಡಿ. ದೇವರಾಜ್ ಅರಸ್ ಬಡಾವಣೆ, 'ಎ' ಬ್ಲಾಕ್, ದಾವಣಗೆರೆ – 06

ಹುಟ್ಟುಹಬ್ಬದ ಶುಭಾಶಯಗಳು
76 YEARS
ರಾಜ್ಯದ ಬಿಜೆಪಿ ಹಿರಿಯ ನಾಯಕರು, ಹಿರಿಯ
ಮುತ್ಸದ್ಧಿ ರಾಜಕಾರಣಿಗಳು, ದಾವಣಗೆರೆ
ಜಿಲ್ಲಾ ಮಾಜಿ ಉಸ್ತುವಾರಿ ಸಚಿವರು, ರೈತ
ನಾಯಕರು, ನಮ್ಮೆಲ್ಲರ ಮಾರ್ಗದರ್ಶಕರು
ಹಾಗೂ ದಾವಣಗೆರೆ ಉತ್ತರ ವಿಧಾನಸಭಾ
ಕ್ಷೇತ್ರದ ಜನ ಮೆಚ್ಚಿದ ಶಾಸಕರೂ ಆದ
ಸನ್ಮಾನ್ಯ ಶ್ರೀ ಎಸ್.ಎ. ರವೀಂದ್ರನಾಥ್
ಅವರಿಗೆ 76ನೇ ಜನ್ಮದಿನದ ಶುಭಾಶಯಗಳು
ಜಯಪ್ರಕಾಶ್ ಲಿಂಗದಹಳ್ಳಿ (JP)
ರಿಯಲ್ ಎಸ್ಟೇಟ್ ಉದ್ಯಮಿಗಳು

ಅಣೆಕಟ್ಟೆಗಳಿಗಾಗಿ ಸುರಕ್ಷತಾ ಸಂಸ್ಥೆ

ಅಣೆಕಟ್ಟೆಗಳ ಪೂರ್ಣ ನಿರ್ವಹಣೆ ಸಂಸ್ಥೆಗೆ ವಹಿಸಲು ರಾಜ್ಯ ಸಚಿವ ಸಂಪುಟದ ನಿರ್ಧಾರ

ಬೆಂಗಳೂರು, ನ. 25 - ಜಲಾಶಯಗಳ ಸುರಕ್ಷತೆಗಾಗಿ ರಾಜ್ಯ ಅಣೆಕಟ್ಟು ಸುರಕ್ಷತಾ ಸಂಸ್ಥೆ ಆರಂಭಿಸಲು ರಾಜ್ಯ ಸಂಪುಟ ಅನುಮೋದನೆ ನೀಡಿದೆ.

ರಾಜ್ಯದಲ್ಲಿ ಅಣೆಕಟ್ಟುಗಳ ನಿರ್ಮಾಣವಾಗಿ ಬಹುವರ್ಷಗಳು ಕಳೆದಿವೆ. ಕೃಷ್ಣರಾಜ ಸಾಗರ ಅಣೆಕಟ್ಟು ಸೇರಿದಂತೆ, ಕೆಲವು ಜಲಾಶಯಗಳಲ್ಲಿ ನೀರು ಸೋರಿಕೆ ಆಗುತ್ತಿದೆ.

ಈ ಹಿನ್ನೆಲೆಯಲ್ಲಿ ಅಣೆಕಟ್ಟೆಯ ಸುರಕ್ಷತೆಗಾಗಿಯೇ ತಾಂತ್ರಿಕ ತಜ್ಞರನ್ನೊಳಗೊಂಡ ಸಂಸ್ಥೆ ರಚಿಸಿ, ಆ ಸಂಸ್ಥೆಗೆ ಇವುಗಳ ಪೂರ್ಣ ನಿರ್ವಹಣೆ ವಹಿಸಲು ನಿರ್ಧರಿಸಿದೆ.

ರಾಜ್ಯದಲ್ಲಿ ಸಣ್ಣ ಪುಟ್ಟ ಸೇರಿದಂತೆ ನೂರಾರು ಅಣೆಕಟ್ಟುಗಳು ಇದ್ದು, ಅವುಗಳ ನಿರ್ವಹಣೆಯನ್ನು ಜಲಸಂಪನ್ಮೂಲ ಇಲಾಖೆ ನೋಡಿಕೊಳ್ಳುತ್ತಿದೆ. ಇನ್ನು ಮುಂದೆ ಪ್ರತ್ಯೇಕ ಸಂಸ್ಥೆಗೆ ನೀಡಿ, ಅದರ ಮೂಲಕ ಎಲ್ಲ ಜಲಾಶಯಗಳ ಸುರಕ್ಷತೆಯನ್ನು ನೋಡುವ ಮತ್ತು ಕಾಪಾಡುವ ಹೊಣೆಗಾರಿಕೆ ಈ ಸಂಸ್ಥೆಗೆ ಇರುತ್ತದೆ. ಕೊರೊನಾ ಮೂರನೇ ಅಲೆ ಸಿದ್ದತೆಗಾಗಿ 317 ಕೋಟಿ ರೂ. ಮೊತ್ತದಲ್ಲಿ ಉಪಕರಣ ಮತ್ತು ಪರಿಕರಗಳನ್ನು ಖರೀದಿಸಲು ಹಾಗೂ 52 ಕೋಟಿ ರೂ.ಗಳ ಮೊತ್ತದಲ್ಲಿ ಕಟ್ಟಡ ಕಾಮಗಾರಿ ಕೈಗೆತ್ತಿಕೊಳ್ಳಲು ಸಭೆ ಸಮ್ಮತಿಸಿದೆ.

ರಾಜ್ಯದಲ್ಲಿ 3ನೇ ಅಲೆ ಭೀತಿ ಇಲ್ಲದಿದ್ದರೂ, ಮುಂಜಾಗ್ರತಾ ಕ್ರಮವಾಗಿ ಉಪಕರಣಗಳ ಖರೀದಿಗಾಗಿ ಈ ದೊಡ್ಡ ಪ್ರಮಾಣದ ಹಣವನ್ನು ಬಿಡುಗಡೆ ಮಾಡಲಾಗಿದೆ. 2022 ರ ಸಾಲಿನ ಸಾರ್ವತ್ರಿಕ ರಜೆ ಹಾಗೂ ಪರಿಮಿತ ರಜೆಗಳಿಗೂ ಸಂಪುಟ ಅನುಮತಿ ನೀಡಿದೆ.

ಕರ್ನಾಟಕ ಲೋಕಾಯುಕ್ತ ಸಂಸ್ಥೆಯಲ್ಲಿ ಖಾಲಿ ಇರುವ ನಿಬಂಧಕರ ಹುದ್ದೆಗಳಿಗೆ ನಿವೃತ್ತ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ವೃಂದದ ಅಧಿಕಾರಿಗಳನ್ನು ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಳ್ಳಲಾಗುವುದು.

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯ ಜಮೀನು ಹಂಚಿಕೆ ನೀತಿಗೆ ತಿದ್ದುಪಡಿ ಮಾಡಲು ಸಭೆ ಅನುಮೋದನೆ ನೀಡಿದೆ. 164 ಸಂಚಾರಿ ಸಸ್ಯ ಆರೋಗ್ಯ ಚಿಕಿತ್ಸಾಲಯ ವಾಹನಗಳನ್ನು 41 ಕೋಟಿ ರೂ.ಗಳ ಅಂದಾಜು ವೆಚ್ಚದಲ್ಲಿ ಖರೀದಿಸಲು ನಿರ್ಧರಿಸಲಾಗಿದೆ.

ನಬಾರ್ಡ್ ಪ್ರಾಯೋಜಿತ ಆರ್‌ಐಡಿಎಫ್-27 ಯೋಜನೆಗಳಡಿ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯಗಳಿಗೆ 79.66 ಕೋಟಿ ರೂ.ಗಳ ಮೊತ್ತದ ಸಿವಿಲ್ ಕಾಮಗಾರಿಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡಿದೆ. ಶೈಕ್ಷಣಿಕ ಉದ್ದೇಶಕ್ಕಾಗಿ ರಾಷ್ಟ್ರೋತ್ಥಾನ ಪರಿಷತ್‌ಗೆ ನಗರ ಹೊರ ವಲಯದ ಯಲಹಂಕ ಹೆಸರಘಟ್ಟ ಸಮೀಪ 9.32 ಎಕರೆ ಜಮೀನನ್ನು ನೀಡಲು ಸಭೆ ಅನುಮೋದನೆ ನೀಡಿದೆ. ಗಟ್ಟಿ ಬಸವಣ್ಣ ಕುಡಿಯುವ ನೀರು ಸರಬರಾಜು ಯೋಜನೆಗೆ 990 ಕೋಟಿ ರೂ. ಮತ್ತು ವಿವರವಾದ ಯೋಜನಾ ವರದಿಗೆ ಆಡಳಿತಾತ್ಮಕ ಅನುಮೋದನೆ ನೀಡಿದೆ.

ಎಸಿಬಿ ದಾಳಿ: ಸಹಕರಿಸದ ಅಧಿಕಾರಿಗಳು ಜೈಲಿಗೆ

ಬೆಂಗಳೂರು, ನ. 25 - ಸರ್ಕಾರಿ ಹಣ ಲೂಟಿ ಮಾಡಿ ಆದಾಯಕ್ಕಿಂತ ಹೆಚ್ಚು ಆಸ್ತಿಪಾಸ್ತಿ ಸಂಪಾದನೆ ಮಾಡಿರುವ ಭ್ರಷ್ಟ ಅಧಿಕಾರಿಗಳನ್ನು ಜೈಲಿಗೆ ಕಳುಹಿಸುವ ಕಾರ್ಯಕ್ಕೆ ಭ್ರಷ್ಟಾಚಾರ ನಿಗ್ರಹ ದಳ (ಎಸಿಬಿ) ಮುಂದಾಗಿದೆ.

ನಿನ್ನೆ ದಾಳಿಗೆ ಒಳಗಾದ 15 ಮಂದಿ ಭ್ರಷ್ಟ ಅಧಿಕಾರಿಗಳಲ್ಲಿ ತನಿಖೆಗೆ ಸಹಕರಿಸ ದವರನ್ನು ಮತ್ತು ದೊಡ್ಡ ಪ್ರಮಾಣದಲ್ಲಿ ಭ್ರಷ್ಟಾಚಾರ ಮಾಡಿದವರನ್ನು ನ್ಯಾಯಾಲ ಯಕ್ಕೆ ಹಾಜರುಪಡಿಸಿ ಜೈಲಿಗೆ ಕಳುಹಿಸ ಲಾಗಿದೆ.

ಕೆಲವು ಅಧಿಕಾರಿಗಳು ಅಕ್ರಮ ಆಸ್ತಿ ಬಗ್ಗೆ ವಿವರಣೆ ನೀಡಲು ನಿರಾಕರಿಸಿದ್ದರು. ಹಾಗಾಗಿ ಇಂದೂ ಕೂಡಾ ವಶಕ್ಕೆ ಪಡೆದು ವಿಚಾರಣೆ ನಡೆಸಿ, ನಂತರ ನ್ಯಾಯಾಂಗ ವಶಕ್ಕೆ ಒಪ್ಪಿಸಲಾಯಿತು.

ಆನ್‌ಲೈನ್ ಮೂಲಕ ಕ.ಸಾ.ಪ. ಸದಸ್ಯತ್ವ

ಜಿಲ್ಲಾ ಕಸಾಪ ಅಧ್ಯಕ್ಷರಾಗಿ ಕಾರ್ಯಭಾರ ವಹಿಸಿಕೊಂಡ ಬಿ. ವಾಮದೇವಪ್ಪ

ದಾವಣಗೆರೆ, ನ. 25 - ತಾಲ್ಲೂಕು ಹಾಗೂ ಹೋಬಳಿ ಘಟಕಗಳಲ್ಲಿ ಕನ್ನಡ ಭವನಗಳ ನಿರ್ಮಾಣ, ಆನ್‌ಲೈನ್ ಮೂಲಕ ಸದಸ್ಯತ್ವ ನೋಂದಣಿ, ತಾಲ್ಲೂಕು ಘಟಕಗಳಲ್ಲಿ ವ್ಯವಸ್ಥಿತ ಕಾರ್ಯಪಡೆಗಳ ರಚನೆ, ವಿಶ್ವ ಕನ್ನಡ ಸಮ್ಮೇಳನ ಆಚರಣೆ ಸೇರಿದಂತೆ ಹಲವಾರು ಕ್ರಮಗಳ ಮೂಲಕ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತನ್ನು ರಾಜ್ಯದಲ್ಲೇ ಆದರ್ಶವಾಗಿ ಮಾಡುವ ಗುರಿ ಹೊಂದಿರುವುದಾಗಿ ಜಿಲ್ಲಾ ಕ.ಸಾ.ಪ. ನೂತನ ಅಧ್ಯಕ್ಷ ಬಿ. ವಾಮದೇವಪ್ಪ ತಿಳಿಸಿದ್ದಾರೆ.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ರವಿಚಂದ್ರ ಅವರಿಂದ ಪರಿಷತ್ ಅಧ್ಯಕ್ಷ ಸ್ಥಾನದ ಕಾರ್ಯಭಾರ ಸ್ವೀಕರಿಸಿದ ನಂತರ ಕುವೆಂಪು ಕನ್ನಡ ಭವನದಲ್ಲಿ ಆಯೋಜಿಸ ಲಾಗಿದ್ದ ಸಮಾರಂಭದಲ್ಲಿ ಅವರು ಮಾತನಾಡುತ್ತಿದ್ದರು.

ಮಹಲಿಂಗ ರಂಗ ಪ್ರಶಸ್ತಿ ಹಾಗೂ ಎಸ್‌ಎಸ್‌ಎಲ್‌ಸಿಯಲ್ಲಿ ಸಾಧನೆ ಮಾಡಿದವರಿಗೆ ಕನ್ನಡ ರತ್ನ ಪ್ರಶಸ್ತಿ ನೀಡುವ ಕಾರ್ಯಗಳನ್ನು ಕೈಗೊಳ್ಳುವ ಜೊತೆಗೆ ಸದಸ್ಯತ್ವ ಪಡೆಯುವ ಶುಲ್ಕ ಕಡಿಮೆ ಮಾಡಲು ರಾಜ್ಯ ಪರಿಷತ್ ಜೊತೆ ಚರ್ಚಿಸುವುದಾಗಿ ಹೇಳಿದರು.

ಸಾಹಿತ್ಯ ಪರಿಷತ್‌ನ ಸದಸ್ಯರ ಜೊತೆ ಚರ್ಚಿಸುವ ಮೂಲಕ ಪರಿಷತ್ ಅಭಿವೃದ್ಧಿಗೆ ಕ್ರಿಯಾ ಯೋಜನೆ ರೂಪಿಸಲಾಗುವುದು ಎಂದೂ ಅವರು ತಿಳಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ನಿಕಟಪೂರ್ವ ಅಧ್ಯಕ್ಷ ಡಾ. ಹೆಚ್.ಎಸ್. ಮಂಜುನಾಥ ಕುರ್ಕಿ, ತಾವು ಅಧ್ಯಕ್ಷ ಸ್ಥಾನದ ಚುನಾವಣೆ ಎದುರಿಸಿದಾಗ ತಮ್ಮ ವಿರುದ್ಧ ಸ್ಪರ್ಧಿಸಿದವರನ್ನೇ ಪರಿಷತ್ತಿನ ಪದಾಧಿಕಾರಿಗಳಾಗಿ ನೇಮಿಸಿದ್ದೆ. ಸಾಹಿತ್ಯ ವಲಯದ ನಾವೆಲ್ಲರೂ ಸಹೋದರರೆಂದೇ ಭಾವಿಸಿದ್ದೇನೆ ಎಂದರು.

ಕಸಾಪ ಮಾಜಿ ಅಧ್ಯಕ್ಷ ಹಾಗೂ ತರಳಬಾಳು ವಿದ್ಯಾಸಂಸ್ಥೆಯ ಆಡಳಿತಾಧಿಕಾರಿ ಪ್ರೊ. ಎಸ್.ಬಿ. ರಂಗನಾಥ್ ಮಾತನಾಡಿ, ಭಾಷೆ, ನೀರು, ಗಡಿ, ಉದ್ಯೋಗ, ಕನ್ನಡ ಮಾಧ್ಯಮದ ಮುಂತಾದ ಸಮಸ್ಯೆಗಳನ್ನು ಬಗೆಹರಿಸಲು ಸರ್ಕಾರದ ಜೊತೆಗೆ ಸಾಹಿತ್ಯ ಪರಿಷತ್ ಕಾರ್ಯ ನಿರ್ವಹಿಸಬೇಕು ಎಂದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ರವಿಚಂದ್ರ ಮಾತನಾಡಿ, ಕನ್ನಡ ಭವನಕ್ಕೆ ಅಗತ್ಯವಾದ ಧ್ವನಿ ವ್ಯವಸ್ಥೆ, ಜನರೇಟರ್, ಶೌಚಾಲಯ ಸೇರಿದಂತೆ ಹಲವಾರು ಸೌಲಭ್ಯಗಳಿಗಾಗಿ ಸರ್ಕಾರಕ್ಕೆ ಪ್ರಸ್ತಾವನೆ ಕಳಿಸುವುದಾಗಿ ಹೇಳಿದರು.

ಹೋಟೆಲ್ ಉದ್ಯಮಿ ಅಣಬೇರು ರಾಜಣ್ಣ ಮಾತನಾಡಿ, ಸಾಹಿತ್ಯ ಪರಿಷತ್ ಚಟುವಟಿಕೆಗಳಿಗಾಗಿ 50 ಸಾವಿರ ರೂ. ಗಳನ್ನು ನೀಡುವುದಾಗಿ ಘೋಷಿಸಿದರು.

ರೈತ ಮುಖಂಡ ಎನ್.ಜಿ. ಪುಟ್ಟಸ್ವಾಮಿ ಮಾತನಾಡಿ, ಸಾಹಿತ್ಯ ಪರಿಷತ್‌ನಲ್ಲಿ ಇನ್ನಷ್ಟು ಉತ್ತಮ ಕೆಲಸಗಳಾಗಬೇಕಿದೆ. ತಾಲ್ಲೂಕಿಗೆ ಒಂದು ಸಾಹಿತ್ಯ ಭವನ ನಿರ್ಮಾಣವಾಗಿ, ರಾಜ್ಯದಲ್ಲೇ ಉತ್ತಮ ಕಾರ್ಯ ನಿರ್ವಹಣೆಯಾಗಲಿ ಎಂದು ಆಶಿಸಿದರು.

ಹರಿಹರ ನಗರಸಭೆ ಮಾಜಿ ಅಧ್ಯಕ್ಷ ರೇವಣಸಿದ್ದಪ್ಪ, ಸಂತೇಬೆನ್ನೂರು ಸಾಹಿತಿ ಕೆ. ಸಿದ್ದಲಿಂಗಪ್ಪ, ಹರಿಹರ ತಾಲ್ಲೂಕು ಕಸಾಪ ನಿಕಟಪೂರ್ವ ಅಧ್ಯಕ್ಷ ಅಂಗಡಿ ರೇವಣಸಿದ್ದಪ್ಪ ಮತ್ತಿತರರು ಮಾತನಾಡಿದರು. ವೇದಿಕೆಯ ಮೇಲೆ ಕ.ಸಾ.ಪ. ಮಾಜಿ ಅಧ್ಯಕ್ಷ ಎ.ಆರ್. ಉಜ್ಜಿನಪ್ಪ ಉಪಸ್ಥಿತರಿದ್ದರು.

ಸಿರಾಜ್ ಅಹಮದ್ ಸ್ವಾಗತಿಸಿದರೆ, ಎನ್.ಎಸ್. ರಾಜು ನಿರೂಪಿಸಿದರು.

ಚುನಾವಣೆ ನಡೆದು ಆಪಾದನೆ ತಪ್ಪಿತು

ಜಿಲ್ಲಾ ಸಾಹಿತ್ಯ ಪರಿಷತ್ ಅಧ್ಯಕ್ಷ ಸ್ಥಾನಕ್ಕೆ ಅವಿರೋಧವಾಗಿ ಆಯ್ಕೆ ನಡೆಯದೇ ಚುನಾವಣೆ ನಡೆದಿದ್ದು ಒಳ್ಳೆಯದೇ ಆಯಿತು. ಸ್ವಾಮೀಜಿಗಳ ಕಾಲು ಹಿಡಿದು ಗೆದ್ದರು ಎಂಬ ಆಪಾದನೆ ತಪ್ಪಿತು ಎಂದು ಕ.ಸಾ.ಪ. ನೂತನ ಅಧ್ಯಕ್ಷ ಬಿ.ವಾಮದೇವಪ್ಪ ಹೇಳಿದ್ದಾರೆ. ಚುನಾವಣೆಗೆ ಮುಂಚೆ ತರಳಬಾಳು ಮಠದ ಹರಳಕಟ್ಟೆ ಪೀಠದ ಪೀಠಾಧ್ಯಕ್ಷರಾದ ಶ್ರೀ ಶಿವಪ್ರಕಾಶ ಸ್ವಾಮೀಜಿ ಅವರು ಅನುಭವ ಮಂಟಪದಲ್ಲಿ ಕರೆದಿದ್ದ ಆಕಾಂಕ್ಷಿಗಳ ಸಭೆಯಲ್ಲಿ ಒಬ್ಬರು ಹೊರತು ಪಡಿಸಿ ಉಳಿದವರೆಲ್ಲ ಬಂದಿದ್ದರು. ಶ್ರೀಗಳ ಆಶಯದಂತೆ ಎಲ್ಲರೂ ತಮ್ಮ ಪರವಾಗಿ ನಾಮಪತ್ರ ವಾಪಸ್ ಪಡೆದರು. ಅಂದೇ ನನ್ನ ಗೆಲುವು ನಿಶ್ಚಿತವಾಗಿತ್ತು ಎಂದವರು ತಿಳಿಸಿದರು.

ಬಾಲಕನ ಮೇಲೆ ಬೀದಿ ನಾಯಿಗಳ ದಾಳಿ : ಗಂಭೀರ ಗಾಯ

ದಾವಣಗೆರೆ, ನ.25- ಮನೆಯ ಪಕ್ಕದಲ್ಲಿ ಆಟವಾಡುತ್ತಿದ್ದ ಏಳು ವರ್ಷದ ಬಾಲಕನ ಮೇಲೆ ಬೀದಿ ನಾಯಿಗಳು ದಾಳಿ ನಡೆಸಿದ್ದು, ಬಾಲಕ ಗಂಭೀರವಾಗಿ ಗಾಯಗೊಂಡಿರುವ ಘಟನೆ ಸ್ಥಳೀಯ ಬಾಷಾ ನಗರದಲ್ಲಿ ನಡೆದಿದೆ. ಬಾಷಾ ನಗರದ 3 ಕ್ರಾಸ್‌ನ ಇರ್ಫಾನ್ ಹಾಗೂ ರೇಶ್ಮಾ ದಂಪತಿ ಪುತ್ರ ಸಾಧಿಕ್ ಗಾಯಗೊಂಡ ಬಾಲಕ. ಸಂಜೆ ಮನೆ ಬಳಿಯಲ್ಲಿ ಆಟವಾಡುತ್ತಿದ್ದಾಗ ಏಳೆಂಟು ನಾಯಿಗಳು ಬಾಲಕನ ಮೇಲೆ ಏಕಾಏಕಿ ದಾಳಿ ನಡೆಸಿವೆ. ಈ ವೇಳೆ ಬಾಲಕನನ್ನು ಸ್ಥಳೀಯರು ರಕ್ಷಣೆ ಮಾಡಿದ್ದಾರೆ. ಘಟನೆಯಲ್ಲಿ ಬಾಲಕನ ಕಣ್ಣು, ಮುಖಕ್ಕೆ ಗಂಭೀರವಾದ ಗಾಯಗಳಾಗಿವೆ. ಬಾಲಕನನ್ನು ಖಾಸಗಿ ಆಸ್ಪತ್ರೆಗೆ ದಾಖಲು ಮಾಡಲಾಗಿದೆ.

ನಾಯಿಗಳನ್ನು ನಿಯಂತ್ರಿಸುವಲ್ಲಿ ನಗರ ಪಾಲಿಕೆ ವಿಫಲವಾಗಿದ್ದು, ಮಗುವಿನ ಚಿಕಿತ್ಸೆಯ ಹೊಣೆಯನ್ನು ಪಾಲಿಕೆಯೇ ಹೊತ್ತುಕೊಳ್ಳಬೇಕು ಎಂದು ಪಾಲಕರು ಆಗ್ರಹಿಸಿದ್ದಾರೆ.

ಆರೋಗ್ಯ ಇಲಾಖೆ ನಿರ್ಲಕ್ಷ್ಯ : ನಾಯಿ, ಹಂದಿ ಹಾವಳಿ ಹೆಚ್ಚಳ

ಪಾಲಿಕೆ ವಿಪಕ್ಷ ನಾಯಕ ಎ. ನಾಗರಾಜ್ ಖಂಡನೆ

ಬಾಲಕನ ಮೇಲೆ ಬೀದಿ ನಾಯಿಗಳು ದಾಳಿ ನಡೆಸಿರುವ ಬಗ್ಗೆ ವ್ಯಾಕುಲತೆ ವ್ಯಕ್ತಪಡಿಸಿರುವ ನಗರ ಪಾಲಿಕೆ ವಿರೋಧ ಪಕ್ಷದ ನಾಯಕ ಎ. ನಾಗರಾಜ್, ಮಹಾನಗರ ಪಾಲಿಕೆ ಆಡಳಿತದ ನಿರ್ಲಕ್ಷ್ಯವನ್ನು ತೀವ್ರವಾಗಿ ಖಂಡಿಸಿದ್ದಾರೆ.

ಸ್ವಚ್ಛತೆಯಲ್ಲಿ ದಾವಣಗೆರೆ ನಗರ 4ನೇ ಸ್ಥಾನ ಬಂದಿದೆ ಎಂದು ಪಾಲಿಕೆ ಮಹಾಪೌರರು, ಆಯುಕ್ತರು ಹೇಳುತ್ತಾರೆ. ಆದರೆ, ಹಳೇ ಭಾಗದ ವಾರ್ಡ್‌ಗಳಿಗೆ ಭೇಟಿ ನೀಡಿ, ಪರಿಶೀಲನೆ ಮಾಡಲಿ. ಅಲ್ಲಿನ ಸ್ವಚ್ಛತೆ ಹೇಗಿದೆ ಎಂಬುದನ್ನು ನೋಡಲಿ ಎಂದು ಅವರು ಹೇಳಿದ್ದಾರೆ.

9ನೇ ವಾರ್ಡ್ ಸೇರಿದಂತೆ, ಹಳೇ ಊರಿನಲ್ಲಿ ಪೌರ ಕಾರ್ಮಿಕರಿಲ್ಲದೆ ಎಲ್ಲೆಂದರಲ್ಲಿ ಕಸದ ರಾಶಿ-ರಾಶಿ ಇದ್ದು, ಚರಂಡಿಗಳು ತುಂಬಿಕೊಂಡಿವೆ. ಚರಂಡಿ ಸ್ವಚ್ಛ ಮಾಡದೇ ತಿಂಗಳು ಗಟ್ಟಲೆ ಆಗಿದ್ದು, ಹೇಗೆ 4ನೇ ಸ್ಥಾನ ಬಂದಿದೆ ಎಂದು ತಿಳಿಯುತ್ತಿಲ್ಲ ಎಂದು ನಾಗರಾಜ್ ಜರಿದಿದ್ದಾರೆ.

ಮತ್ತೆ ನಾಯಿಗಳ ಕಾಟ ಹೇಳ ತೀರದು. ಪ್ರತಿದಿನ ನಾಯಿಗಳಿಂದ ಮಕ್ಕಳು, ದೊಡ್ಡವರು ಕಚ್ಚಿಸಿಕೊಂಡು ದಿನೇ ದಿನೇ ಪಾಲಿಕೆಗೆ ಇಡೀ ಶಾಪ ಹಾಕುತ್ತಿದ್ದು, ಅಲ್ಲಿನ ನಾಗರಿಕರು ಪ್ರತಿಭಟನೆಗಳನ್ನು ನಡೆಸಿದ್ದರೂ ಇದ್ಯಾವುದಕ್ಕೂ ಆಯುಕ್ತರಾಗಲೀ, ಮಹಾಪೌರ ರಾಗಲೀ ತಲೆ ಕೆಡಿಸಿಕೊಳ್ಳುತ್ತಿಲ್ಲ. ಈ ಕೂಡಲೇ ನಾಯಿಗಳ ಉಪಟಳ ನಿಲ್ಲಿಸಲು ಕ್ರಮಕೈಗೊಳ್ಳಲಿ ಹಾಗೂ ನಾಯಿಗಳನ್ನು ಊರಿಂದ ಸಾಗಿಸಲು ಕ್ರಮಕೈಗೊಳ್ಳಲಿ ಎಂದು ಅವರು ಒತ್ತಾಯಿಸಿದ್ದಾರೆ.

ನೌಕರರ ವರ್ಗಾವಣೆಗೆ ಅನುಮತಿ ಸಚಿವರ ಒತ್ತಡದ ನಂತರ ಕ್ರಮ

ಗ್ರೂಪ್ ಬಿ, ಸಿ, ಮತ್ತು ಡಿ ಅಧಿಕಾರಿ, ನೌಕರರಿಗೆ ಅನ್ವಯಿಸುವಂತೆ ಆದೇಶ

ಬೆಂಗಳೂರು, ನ. 25 - ಸಚಿವರುಗಳ ಒತ್ತಡಕ್ಕೆ ಮಣಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ವರ್ಗಾವರ್ಗಿ ಅವಧಿ ಮುಗಿದಿದ್ದರೂ ಕೆಲವು ನೌಕರರನ್ನು ವರ್ಗಾವಣೆ ಮಾಡಲು ಸಚಿವರುಗಳಿಗೆ ಅವಕಾಶ ಮಾಡಿಕೊಟ್ಟಿದ್ದಾರೆ.

ಈ ಸಂಬಂಧ ಮುಖ್ಯಕಾರ್ಯದರ್ಶಿ ಯವರನ್ನು ಆದೇಶ ಹೊರಡಿಸಿದ್ದು, ಗ್ರೂಪ್ ಬಿ, ಸಿ, ಮತ್ತು ಡಿ ಅಧಿಕಾರಿ, ನೌಕರರಿಗೆ ಅನ್ವಯಿಸುವಂತೆ ಈ ಆದೇಶ ಹೊರಬಿದ್ದಿದೆ.

ಲಭ್ಯವಿರುವ ಖಾಲಿ ಸ್ಥಾನಗಳಿಗೆ ಕನಿಷ್ಠ ಸೇವಾವಧಿಯನ್ನು ಪೂರೈಸಿರುವ ನೌಕರರ ವರ್ಗಾವಣೆಗಳನ್ನು ಅನುಮೋದಿಸಲು ಆಯಾ ಇಲಾಖಾ ಸಚಿವರುಗಳು ಅಧಿಕಾರ ಹೊಂದಿರುತ್ತಾರೆ. ಈ ಆದೇಶ ಹೊರಡಿಸಿದ ಒಂದು ತಿಂಗಳ ಅವಧಿಗೆ ಮಾತ್ರ ಆಯಾ ಇಲಾಖಾ ಸಚಿವರು ಅಧಿಕಾರಿ ಚಲಾಯಿಸಬಹುದು. ವರ್ಗಾವಣೆ ಮಾಡಿದಾಗ ಅಂತಹವರಿಂದ ತೆರವಾದ ಸ್ಥಾನವನ್ನು ಮತ್ತೊಂದು ವರ್ಗಾವಣೆ ಮೂಲಕ ಭರ್ತಿ ಮಾಡುವಂತಿಲ್ಲ.

ಮುಂದಿನ ಸಾರ್ವತ್ರಿಕ ವರ್ಗಾವಣೆ ಅವಧಿಯವರೆಗೂ ಯಾವುದೇ ಅವಧಿ ಪೂರ್ಣ ವರ್ಗಾವಣೆ ಮಾಡುವಂತಿಲ್ಲ. ಇಂತಹ ವರ್ಗಾವಣೆಗಳನ್ನು ಕೋರಿ ಯಾವುದೇ ಪ್ರಸ್ತಾವನೆಗಳನ್ನು ಸಚಿವರು, ಮುಖ್ಯಮಂತ್ರಿಯವರಿಗೆ ಸಲ್ಲಿಸುವಂತಿಲ್ಲ ಎಂದು ಸ್ಪಷ್ಟವಾಗಿ ತಿಳಿಸಿದೆ.

ಸರ್ಕಾರಿ ನೌಕರರ ವರ್ಗಾವಣೆ ಕುರಿತಂತೆ ವಿಸ್ತೃತವಾದ ಮಾರ್ಗಸೂಚಿ ನೀಡಿದೆ. ಇದರ ಅನ್ವಯವೇ ವರ್ಗಾವರ್ಗಿಯಾಗಬೇಕು. ವರ್ಗಾವಣೆಯನ್ನು ಪ್ರತಿ ವರ್ಷ ಮೇ ಮತ್ತು ಜೂನ್ ತಿಂಗಳಲ್ಲಿ ಮಾತ್ರ ಕೈಗೆತ್ತಿಕೊಳ್ಳಲಾಗುತ್ತಿತ್ತು. ಆದರೆ, ಕೋವಿಡ್ ಹಾಗೂ ನೆರೆ ಮತ್ತು ಅಕಾಲಿಕ ಮಳೆಯಿಂದ ಹಾಗೂ ಬದಲಾದ ರಾಜಕೀಯ ಪರಿಸ್ಥಿತಿಯಲ್ಲಿ ಸರ್ಕಾರಿ ನೌಕರರ ವರ್ಗಾವಣೆ ನಡೆದಿಲ್ಲ.

ಬಾಗಳಿಯಲ್ಲಿ ಬೆಳೆ ಹಾನಿ ವೀಕ್ಷಿಸಿದ ಡಿಸಿ

ಹರಪನಹಳ್ಳಿ

ಹರಪನಹಳ್ಳಿ, ನ.25- ತಾಲ್ಲೂಕಿನ ಬಾಗಳಿ ಗ್ರಾಮದಲ್ಲಿ ಇತ್ತೀಚಿಗೆ ಸುರಿದ ಅಕಾಲಿಕ ಮಳೆಗೆ ಸುಮಾರು 50 ಹೆಕ್ಟೇರ್ ಪ್ರದೇಶದ ಮೆಣಸಿನ ಬೆಳೆ ಹಾನಿಯಾಗಿದ್ದು, ಹಾನಿಯಾದ ಪ್ರದೇಶಕ್ಕೆ ಜಿಲ್ಲಾಧಿಕಾರಿಗಳು ಭೇಟಿ ನೀಡಿ ಬೆಳೆ ವೀಕ್ಷಣೆ ಮಾಡಿದರು. ಈ ಸಂದರ್ಭದಲ್ಲಿ ತಹಶೀಲ್ದಾರ್ ಎಲ್.ಎಂ.ನಂದೀಶ್, ಕೃಷಿ ಸಹಾಯಕ ನಿರ್ದೇಶಕ ಮಂಜುನಾಥ ಗೊಂದಿ, ರೈತರಾದ ಜಗದೀಶ್, ಕೊಟ್ಟಪ್ಪ ಸೇರಿದಂತೆ ಇತರರು ಇದ್ದರು.

ವಾಲ್ಮೀಕಿ ಜಾತ್ರೆಯ ಹೆಸರಿನಲ್ಲಿ ಸಮಾಜದ ಹಣ ದುರ್ಬಳಕೆ : ಆರೋಪ

ದಾವಣಗೆರೆ, ನ.25- ಸಮಾಜದ ಅಭಿವೃದ್ಧಿಗೆ ಬಳಕೆಯಾಗಬೇಕಿದ್ದ ಹಣವನ್ನು ರಾಜನಹಳ್ಳಿ ವಾಲ್ಮೀಕಿ ಗುರುಪೀಠದ ಶ್ರೀ ವಾಲ್ಮೀಕಿ ಪ್ರಸನ್ನಾನಂದ ಸ್ವಾಮೀಜಿ ವಾಲ್ಮೀಕಿ ಜಾತ್ರೆ ಹೆಸರಿನಲ್ಲಿ ದುರ್ಬಳಕೆ ಮಾಡಿದ್ದಾರೆ.

ಮಠದ ಸ್ವತ್ತನ್ನು ಕಾನೂನು ಬಾಹಿರವಾಗಿ ತಮ್ಮ ಹೆಸರಿಗೆ ಮಾಡಿಸಿಕೊಂಡಿದ್ದಾರೆ ಎಂದು ಗಂಭೀರ ಆರೋಪ ಮಾಡಿರುವ ನಾಯಕ ಸಮಾಜದ ಮಾಜಿ ಅಧ್ಯಕ್ಷ, ಹಿರಿಯ ವಕೀಲ ಗುಮ್ಮನೂರು ಕೆ.ಎಂ. ಮಲ್ಲಿಕಾರ್ಜುನ್, ಶ್ರೀಗಳು ಕೂಡಲೇ ಪೀಠ ತ್ಯಾಗ ಮಾಡಬೇಕೆಂದು ಆಗ್ರಹಿಸಿದ್ದಾರೆ.

ವಾಲ್ಮೀಕಿ ಜಾತ್ರೆಗೆ ಎಸ್ಟಿ ಸಮುದಾಯದ ಶಿಕ್ಷಣ, ಕೃಷಿ, ಸ್ವಯಂ ಉದ್ಯೋಗ ಹೀಗೆ ಸಮಾಜದ ಅಭಿವೃದ್ಧಿಗೆ ಕಾನೂನು ವ್ಯಾಪ್ತಿಯಲ್ಲಿ ಮೀಸಲಿಟ್ಟಿರುವ 14.47 ಕೋಟಿ ರೂ. ಗಳಲ್ಲಿ ಸರ್ಕಾರದ ಪರಿಶಿಷ್ಟ ವರ್ಗಗಳ ಕಲ್ಯಾಣ ನಿರ್ದೇಶನಾಲಯದಿಂದ ಏಳು ಕೋಟಿ ಹಣ ಬಿಡುಗಡೆಯಾಗಿದ್ದು, ಅದನ್ನು ಈ



JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte